# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ ಭಾನುವಾರ, ಜನವರಿ 02, 2022

ಸಂಪುಟ : 48 ಸಂಚಿಕೆ : 232 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


## ಭರವಸೆಯೊಂದಿಗೆ 2022ಕ್ಕೆ ಸ್ವಾಗತ

ದಾವಣಗೆರೆ, ಜ.1- ಹೊಸ ವರ್ಷವನ್ನು ನಗರದ ಜನತೆ ಸಂಭ್ರಮದಿಂದ ಸ್ವಾಗತಿಸಿದರು. ಶನಿವಾರ ಮನೆಗಳಲ್ಲಿ, ಶಾಲೆಗಳಲ್ಲಿ, ಹೋಟೆಲ್‌ಗಳಲ್ಲಿ, ಪಾರ್ಕುಗಳಲ್ಲಿ ಸಂಭ್ರಮಾಚರಣೆ ಕಂಡು ಬಂತು.

ಹೊಸ ಬಟ್ಟೆ ತೊಟ್ಟ ಮಕ್ಕಳು ಶಾಲೆಗಳಲ್ಲಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಸಂಭ್ರಮಿಸಿದರು. ಕೆಲವು ಶಾಲೆಗಳು ಹಾಗೂ ಕಾಲೇಜುಗಳಲ್ಲಿ ಕೇಕ್ ಕತ್ತರಿಸುವ ಮೂಲಕ ನಡೆದ ಸಂಭ್ರಮಾಚರಣೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಶಿಕ್ಷಕರೂ ಪಾಲ್ಗೊಂಡಿದ್ದರು.

**ಪಾರ್ಕುಗಳಲ್ಲೂ ಸಂಭ್ರಮ:** ಯುವಕ-ಯುವತಿಯರ ಗುಂಪು ನಗರದ ಉದ್ಯಾನವನಗಳಲ್ಲಿ ಕೇಕ್ ಕತ್ತರಿಸಿ, ಸಿಹಿ ತಿನ್ನುವ ಮೂಲಕ ಹೊಸ ವರ್ಷವನ್ನು ಬರಮಾಡಿಕೊಂಡರು.

ಇನ್ನು ಬಟ್ಟೆ ಅಂಗಡಿ, ಜ್ಯುವೆಲರಿ ಸೇರಿದಂತೆ ಕೆಲ ದೊಡ್ಡ ಅಂಗಡಿಗಳಲ್ಲಿನ ನೌಕರರು, ಪೆಟ್ರೋಲ್ ಬಂಕ್‌ಗಳ ಸಿಬ್ಬಂದಿಗಳು, ಖಾಸಗಿ ಸಂಸ್ಥೆ ಕಚೇರಿಗಳಲ್ಲಿನ ನೌಕರರು ತಮ್ಮ ಕಾರ್ಯ ಸ್ಥಾನಗಳಲ್ಲಿ ಗುಂಪಾಗಿ ಸೇರಿ ಕೇಕ್ ಕತ್ತರಿಸಿ ಸಂಭ್ರಮಿಸಿದರು.

**ಹೋಟೆಲ್‌ಗಳು ಭರ್ತಿ:** ಮಧ್ಯಾಹ್ನ ಊಟದ ಹೋಟೆಲ್‌ಗಳು ಗ್ರಾಹಕರಿಂದ ಭರ್ತಿಯಾಗಿದ್ದವು. ಅದರಲ್ಲೂ ವಿಶೇಷವಾಗಿ ಉತ್ತರ ಭಾರತೀಯ ತಿನಿಸುಗಳುಳ್ಳ ಹೋಟೆಲ್‌ಗಳು, ಬೈಪಾಸ್ ರಸ್ತೆ ಬಳಿಯ ಡಾಬಾಗಳಲ್ಲಿ ಜನ ಹೆಚ್ಚಾಗಿದ್ದರು. ಕೆಲವರು ಕುಟುಂಬ ಸಹಿತ (2ನೇ ಪುಟಕ್ಕೆ)



ಹೊಸ ವರ್ಷದ ಅಂಗವಾಗಿ ಹೋಟೆಲ್‌ನಲ್ಲಿ ಮಹಿಳೆಯರ ಭೋಜನ ಕೂಟ

### ಮದ್ಯದ ವಹಿವಾಟು ಕುಸಿತ

ನೈಟ್ ಕರ್ಫ್ಯೂ ಹಿನ್ನೆಲೆಯಲ್ಲಿ ಹೊಸ ವರ್ಷವನ್ನು ಮದ್ಯ ಸೇವಿಸಿ ಸಂಭ್ರಮಿಸಬೇಕೆನ್ನುವ ಆಸೆಯಲ್ಲಿದ್ದ ಮದ್ಯಪ್ರಿಯರಿಗೆ ನಿರಾಶೆಯಾಗಿದೆ. ಕಳೆದ ವರ್ಷ ಡಿಸೆಂಬರ್ ತಿಂಗಳಿಗೆ ಹೋಲಿಸಿದರೆ ಮದ್ಯದ ವಹಿವಾಟು ಕುಸಿತ ಕಂಡಿದೆ.

ಸಾಮಾನ್ಯವಾಗಿ ಪ್ರತಿ ವರ್ಷ ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ಮದ್ಯರಾತ್ರಿ 12 ಗಂಟೆ ವರೆಗೆ ಮದ್ಯ ಸೇವನೆಗೆ ಅವಕಾಶವಿರುತ್ತಿತ್ತು. ಕೆಲವೊಂದು ಹೋಟೆಲ್‌ಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನೂ ಏರ್ಪಡಿಸಲಾಗುತ್ತಿತ್ತು. ಆದರೆ ಶುಕ್ರವಾರ ರಾತ್ರಿ 10 (2ನೇ ಪುಟಕ್ಕೆ)

## ಸ್ಥಿರಾಸ್ತಿ ನೋಂದಣಿಗೆ 10% ವಿನಾಯಿತಿ

### ಜ.1 ರಿಂದ ಮಾ.31 ರವರೆಗೆ ಮಾರ್ಗಸೂಚಿ ದರದಲ್ಲಿ ಈ ರಿಯಾಯಿತಿ ಲಭ್ಯ

ಬೆಂಗಳೂರು, ಜ. 1 - ಎಲ್ಲ ವಿಧದ ಸ್ಥಿರಾಸ್ತಿಗಳ ಮಾರಾಟ ಮತ್ತು ಖರೀದಿ ಮಾಡುವವರಿಗೆ ನೋಂದಣಿಯಲ್ಲಿ ಶೇ. 10 ರಷ್ಟು ರಿಯಾಯಿತಿ ನೀಡಿ, ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಜನವರಿ 1 ರಿಂದ ಮಾರ್ಚ್ 31 ರವರೆಗೆ ಮಾರ್ಗಸೂಚಿ ದರದಲ್ಲಿ ಈ ರಿಯಾಯಿತಿ ಲಭ್ಯವಾಗಲಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ಪ್ರಕಟಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕೃಷಿ ಜಮೀನು, ಕೃಷಿಯೇತರ ಜಮೀನು, ನಿವೇಶನ, ಕಟ್ಟಡ, ಅಪಾರ್ಟ್‌ಮೆಂಟ್ ಸೇರಿದಂತೆ, ಎಲ್ಲಾ ರೀತಿಯ ಸ್ಥಿರಾಸ್ತಿಗಳ ನೋಂದಣಿಗೆ ಈ ರಿಯಾಯಿತಿ ಲಭ್ಯವಾಗಲಿದೆ ಎಂದಿದ್ದಾರೆ.

ಕಳೆದ ಎರಡು ವರ್ಷಗಳಿಂದ ಕೋವಿಡ್ ಕಾರಣದಿಂದ ಜನರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಅವರು ಖರೀದಿ ಮಾಡುತ್ತಿರುವ ಆಸ್ತಿಗಳನ್ನು ನೋಂದಣಿಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಗ್ರಾಹಕರ ಅನುಕೂಲ ಮತ್ತು ರಾಜ್ಯದ ಆದಾಯವನ್ನು ಹೆಚ್ಚಿಸಲು ಇಂತಹ ಕ್ರಮ ತೆಗೆದುಕೊಂಡಿದ್ದೇವೆ ಎಂದವರು ಹೇಳಿದ್ದಾರೆ.

ಆಯಾ ಪ್ರದೇಶದ ಮಾರ್ಗಸೂಚಿ ದರದ ಪ್ರಕಾರ ಈ ರಿಯಾಯಿತಿ ಅನ್ವಯವಾಗಲಿದೆ. ಮುಂದಿನ ಮೂರು ತಿಂಗಳ ಅವಧಿಯಲ್ಲಿ ಗ್ರಾಹಕರು ತಮ್ಮ ಆಸ್ತಿಗಳನ್ನು ನೋಂದಣಿ ಮಾಡಿಕೊಂಡು ಉಳಿತಾಯ ಮಾಡಿಕೊಳ್ಳಬೇಕು ಎಂದರು.

## ನಾಟಕಗಳಲ್ಲಿರಲಿದೆ ನೈಜತೆ

### ಜಮುರಾ ನಾಟಕೋತ್ಸವದಲ್ಲಿ ಸಚಿವ ಸೋಮಣ್ಣ



ನಟಿ ತಾರಾ ಅವರಿಗೆ 2021ನೇ ಸಾಲಿನ ಶಿಮುಶ ರಾಷ್ಟ್ರೀಯ ನಾಟಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಚಿತ್ರದುರ್ಗ, ಜ. 1- ಅಭಿನಯ, ಅಭಿವ್ಯಕ್ತಿ, ಹಾಡುಗಾರಿಕೆ ಪ್ರದರ್ಶಿಸಲು ಸೂಕ್ತವಾದ ವೇದಿಕೆ ನಾಟಕ ರಂಗ. ಇಲ್ಲಿ ಸಹಜತೆ ಅರ್ಥಾತ್ ನೈಜತೆ ಇರುತ್ತದೆ ಎಂದು ವಸತಿ ಸಚಿವ ವಿ. ಸೋಮಣ್ಣ ಹೇಳಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಮಠದಲ್ಲಿ ಆರಂಭವಾದ ಜಮುರಾ ರಾಷ್ಟ್ರೀಯ ನಾಟಕೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ, ಅವರು ಮಾತಾಡಿದರು.

900 ವರ್ಷಗಳ ಹಿಂದೆ ಬಸವಣ್ಣನವರ ಇತಿಹಾಸವನ್ನು ಇನ್ನೂ ನೂರಾರು ವರ್ಷ ಜನರಿಗೆ ತಲುಪಿಸುವ ಕೆಲಸವನ್ನು ಮುರುಘಾ ಶರಣರು ಮಾಡುತ್ತಿದ್ದಾರೆ. ಬಸವ ಕಲ್ಯಾಣದ ಜನರು ಇಂದಿಗೂ ಬಸವಣ್ಣನವರು ಜೀವಂತವಾಗಿದ್ದಾರೆಂದು ಭಾವಿಸಿದ್ದಾರೆ. ಶ್ರೀಮಠಕ್ಕೆ ದೊಡ್ಡ ಇತಿಹಾಸವಿದೆ ಎಂದರು.

ಮುರುಘಾ ಶರಣರ ಕಾರ್ಯವೈಖರಿಗಳು ನಮಗೆ ಇಷ್ಟ. ತಮ್ಮ ತೀರ್ಮಾನಗಳು ಕಹಿಯಾಗಿದ್ದರೂ, ಮುಂದೆ ಅವು ಸಿಹಿಯನ್ನು ನೀಡುತ್ತವೆ ಎಂದು ಅಭಿಪ್ರಾಯಿಸಿದರು. ಮಧ್ಯಕರ್ನಾಟಕದಲ್ಲಿಯೂ ಸಹ ಅಧಿವೇಶನ ಮಾಡಿ ಈ ಭಾಗದ ಸಮಸ್ಯೆಗಳನ್ನು ಬಗೆಹರಿಸಿ ಎಂದು ಡಾ. ಶಿವಮೂರ್ತಿ ಮುರುಘಾ ಶರಣರ ಸೂಚನೆಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದರು.

ಕಲಾವಿದನಿಗೆ ಬಣ್ಣ ಹಚ್ಚುವ ಮೂಲಕ ನಾಟಕೋತ್ಸವ ಉದ್ಘಾಟಿಸಿ ಮಾತನಾಡಿದ ನಾಟಕ ಅಕಾಡೆಮಿ ಅಧ್ಯಕ್ಷ ಆರ್. ಭೀಮಸೇನ, ನಾನು ಜಮುರಾ ಕಲಾಲೋಕದ ಕಲಾವಿದ. ಶ್ರೀಗಳ ಆಶೀರ್ವಾದಿಂದ ಇಂದು ನಾಟಕ ಅಕಾಡೆಮಿ ಅಧ್ಯಕ್ಷ (2ನೇ ಪುಟಕ್ಕೆ)

## ಪಿಎಂ - ಕಿಸಾನ್ : 10 ಕೋಟಿ ರೈತರ ಖಾತೆಗಳಿಗೆ 20 ಸಾವಿರ ಕೋಟಿ ರೂ.

**ರಾಜ್ಯದ 34 ಲಕ್ಷ ರೈತರ ಖಾತೆಗೆ 685 ಕೋಟಿ ರೂ. ಜಮಾ**

ಬೆಂಗಳೂರು, ಜ. 1 - ಪ್ರಧಾನಿ ನರೇಂದ್ರ ಮೋದಿ ಪಿಎಂ ಕಿಸಾನ್ ಯೋಜನೆಯಡಿ ದೇಶದ ರೈತರಿಗೆ 10ನೇ ಕಂತಿನ ಹಣ ಬಿಡುಗಡೆಗೊಳಿಸಿದ್ದು, ಈ 10ನೇ ಕಂತಿನಡಿ ಕರ್ನಾಟಕ ರಾಜ್ಯದ ಒಟ್ಟು 34,26,401 ರೈತರಿಗೆ 685 ಕೋಟಿ 28 ಲಕ್ಷ 2 ಸಾವಿರದ ರೂ. ಹಣ ಬಿಡುಗಡೆಯಾಗಿದೆ.

2018-19 ರಿಂದ ಜ.1, 2022 ರವರೆಗೆ 10 ನೇ ಕಂತಿನವರೆಗೆ ರಾಜ್ಯದ ಒಟ್ಟು 54 ಲಕ್ಷದ 52 ಸಾವಿರ ರೈತ ಕುಟುಂಬಗಳಿಗೆ ಒಟ್ಟು 8707 ಕೋಟಿ 97ಲಕ್ಷ ರೂ.ಮೊತ್ತ ಬಿಡುಗಡೆಯಾದಂತಾಗಿದೆ.

ಕರ್ನಾಟಕ ರಾಜ್ಯದಲ್ಲಿ ಭಾರತ ಸರ್ಕಾರದ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು ಕಳೆದ 2019 ಫೆ.1ರಿಂದ (2ನೇ ಪುಟಕ್ಕೆ)

## ಕೆಐಎಡಿಬಿ ಭೂಮಿ ಭೋಗ್ಯ, ಮಾರಾಟಕ್ಕೆ ನಿರ್ಧಾರ

ಬೆಂಗಳೂರು, ಜ. 1 - ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ)ಯ ಮೂಲಕ ಕೈಗಾರಿಕಾ ಉದ್ದೇಶಗಳಿಗೆ ಹಂಚಿಕೆಯಾದ 2 ಎಕರೆಗೂ ಹೆಚ್ಚಿನ ಭೂಮಿಯನ್ನು 10 ವರ್ಷಗಳ ಅವಧಿಯ ಭೋಗ್ಯ ಮತ್ತು ಮಾರಾಟ (ಲೀಸ್ ಕಂ ಸೇಲ್) ಕ್ಕೆ ನೀಡಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ನಿರ್ಧರಿಸಿದೆ. ಈ ಮೂಲಕ ರಾಜ್ಯದಲ್ಲಿ ಬಂಡವಾಳ ಹೂಡಲು ಮುಂದೆ ಬರುವ ಉದ್ಯಮಿಗಳು ಹಾಗೂ ಕೈಗಾರಿಕೋದ್ಯಮಿಗಳಿಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ಆರ್.ನಿರಾಣಿ ಹೊಸ ವರ್ಷದ ಬಂಪರ್ ಕೊಡುಗೆ ನೀಡಿದ್ದಾರೆ. 2022ರ ಹೊಸ ವರ್ಷ ಕರ್ನಾಟಕಕ್ಕೆ (2ನೇ ಪುಟಕ್ಕೆ)

## ವಾರಣಾಸಿ ಮಾದರಿಯಲ್ಲಿ ತುಂಗಾರತಿ

### 2023ರ ಜನವರಿಯಲ್ಲಿ ಮೋದಿ ಚಾಲನೆ: ಶ್ರೀ ವಚನಾನಂದ ಸ್ವಾಮೀಜಿ



ಹರಪನಹಳ್ಳಿ, ಜ.1- ಉತ್ತರ ಭಾರತದ ವಾರಣಾಸಿ ಮಾದರಿಯ ಗಂಗಾರತಿಯಂತೆ ದಕ್ಷಿಣ ಭಾರತದಲ್ಲಿನ ಹರಿಹರದ ತುಂಗಭದ್ರಾ ನದಿ ತೀರದಲ್ಲಿ ತುಂಗಾರತಿ ನಡೆಯಲಿದ್ದು, 2023ರ ಜನವರಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಚಾಲನೆ ನೀಡಲಿದ್ದಾರೆ ಎಂದು ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಹೇಳಿದರು.

ಪಟ್ಟಣದ ನ್ಯಾಯವಾದಿ ಅಜ್ಜಣ್ಣನವರ ನಿವಾಸದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, 30 ಕೋಟಿ ರೂ.ಅನುದಾನದಲ್ಲಿ 108 ಮಂಟಪಗಳನ್ನು ಹೊಂದಿರುವ ಕ್ರಿಯಾಯೋಜನೆ ಸಿದ್ದಪಡಿಸಿ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಶಂಕುಸ್ಥಾಪನೆ ನೇರವೇರಿಸಲಿದ್ದಾರೆ ಎಂದರು.

ಸುಮಾರು 800 ವರ್ಷಗಳ ಇತಿಹಾಸ ಹೊಂದಿರುವ ಕರ್ನಾಟಕದ ಮಧ್ಯ ಭಾಗದಲ್ಲಿರುವ ಹರಿಹರ ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಪ್ರಸಿದ್ದಿಯಾಗಿದೆ. ಈ ಭಾಗದಲ್ಲಿ ಹರಿಹರ ಪಂಚಮಸಾಲಿ ಪೀಠ, ರಾಜನಹಳ್ಳಿಯಲ್ಲಿ ವಾಲ್ಮೀಕಿ ಗುರುಪೀಠ, ಬೆಳ್ಳೂಡಿಯ ಕನಕ ಗುರು ಪೀಠ, ನೊಣಬ ಗುರು ಪೀಠ, ರೆಡ್ಡಿ ಗುರು ಪೀಠ ಸೇರಿದಂತೆ ಅನೇಕ ಪೀಠಗಳು ಇರುವುದರಿಂದ ಹರಿಹರವನ್ನು ಧಾರ್ಮಿಕ ಶ್ರದ್ಧಾ ಪ್ರವಾಸಿ ತಾಣವಾಗಿ ಮಾರ್ಪಡಿಸುವ ಗುರಿ ನಮ್ಮದಾಗಿದೆ ಎಂದು ತಿಳಿಸಿದರು.

ಹರಿಹರ ಧಾರ್ಮಿಕ ಕೇಂದ್ರವಾಗಿ ಬೆಳೆಯುವುದರಿಂದ ಸುಮಾರು 20 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗಲಿವೆ ಎಂದರು. ಹರಜಾತ್ರೆಯ ನಿಮಿತ್ತ ಜನವರಿ 14-15ರಂದು ಪೀಠಾರೋಹಣ ಕಾರ್ಯಕ್ರಮದಲ್ಲಿ ಉದ್ಯಮಿಯಾಗು-ಉದ್ಯೋಗ ನೀಡು, ರಾಷ್ಟ್ರೀಯ ಶಿಕ್ಷಣ, ಕೃಷಿ ಕೌಶಲ್ಯ, (2ನೇ ಪುಟಕ್ಕೆ)

## ವೈಷ್ಣೋದೇವಿ ದೇವಾಲಯದ ನೂಕು ನುಗ್ಗಲಿನಲ್ಲಿ 12 ಸಾವು

### 2 ಗುಂಪುಗಳ ಘರ್ಷಣೆಯಿಂದ ದುರ್ಘಟನೆ; ಕೊರೊನಾ ನಿಯಮ ಪಾಲಿಸಿಲ್ಲ ಎಂದು ಆರೋಪ

ಜಮ್ಮು, ಜ. 1 – ಜಮ್ಮು ಮತ್ತು ಕಾಶ್ಮೀರದ ಪ್ರಸಿದ್ಧ ಮಾತಾ ವೈಷ್ಣೋದೇವಿ ದೇವಾಲಯದಲ್ಲಿ ನೂಕು ನುಗ್ಗಲು ಉಂಟಾಗಿ 12 ಜನ ಸಾವನ್ನಪ್ಪಿದ ಘಟನೆ ನಡೆದಿದೆ. ಹೊಸ ವರ್ಷದ ಸಂದರ್ಭದಲ್ಲಿ ಹೆಚ್ಚಿನ ಭಕ್ತರು ಆಗಮಿಸಿದಾಗ ಎರಡು ಗುಂಪುಗಳ ನಡುವೆ ಶನಿವಾರ ಬೆಳಗಿನ ಜಾವ ಘರ್ಷಣೆ ನಡೆದಿರುವುದು ದುರ್ಘಟನೆಗೆ ಕಾರಣವಾಗಿದೆ.

ತ್ರಿಕೂಟ ಬೆಟ್ಟಗಳ ಮೇಲಿರುವ ದೇವಾಲಯದಲ್ಲಿ ಈ ರೀತಿಯ ದುರಂತ ನಡೆದಿರುವುದು ಇದೇ ಮೊದಲು. ಪ್ರತಿ ವರ್ಷ ಲಕ್ಷಾಂತರ ಜನ ದೇವಾಲಯಕ್ಕೆ ಭೇಟಿ ನೀಡುತ್ತಾರೆ.

ಶನಿವಾರ ಬೆಳಗಿನ ಜಾವ 2.15ರ ಸಮಯದಲ್ಲಿ ದೇವಾಲಯದ ಗರ್ಭಗುಡಿಯ ಹೊರಗಿರುವ ಕಿರಿದಾದ ಮೂರನೇ ಸಂಖ್ಯೆಯ ಮಾರ್ಗದಲ್ಲಿ ನೂಕು ನುಗ್ಗಲು ಉಂಟಾಗಿದೆ. ಇಲ್ಲಿಗೆ 13 ಕಿ.ಮೀ. ದೂರದಲ್ಲಿರುವ ಕಾತ್ರಾದಿಂದ ಜನರು ಚಾರಣ ಮಾಡಿಕೊಂಡು ದೇವಾಲಯಕ್ಕೆ ಬರುತ್ತಾರೆ.

ಪ್ರತಿದಿನ 50 ಸಾವಿರ ಭಕ್ತರು ದೇವಾಲಯಕ್ಕೆ ಬರಲು ಅನುಮತಿ ಇದೆ. ಕೊರೊನಾ ಹಿನ್ನೆಲೆಯಲ್ಲಿ 35 ಸಾವಿರ ಜನ ಮಾತ್ರ ಬರಲು ಅವಕಾಶ ನೀಡಲಾಗುತ್ತಿತ್ತು.

ಘಟನೆಯ ಬಗ್ಗೆ ಉನ್ನತ ಹಂತದ ತನಿಖೆ ನಡೆಸುವಂತೆ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಜನರಲ್ ಮನೋಜ್ ಸಿನ್ಹ ಆದೇಶಿಸಿದ್ದಾರೆ.

ಉಸಿರು ಕಟ್ಟಿದ ಕಾರಣ ಬಹುತೇಕ ಸಾವುಗಳು ಸಂಭವಿಸಿವೆ ಎಂದು ಪೊಲೀಸರು ಹೇಳಿದ್ದಾರೆ. ಮೃತರಲ್ಲಿ ಏಳು ಜನ ಉತ್ತರ ಪ್ರದೇಶ, ಮೂವರು ದೆಹಲಿ ಹಾಗೂ ತಲಾ ಒಬ್ಬರು ಹರಿಯಾಣ, ಜಮ್ಮು ಕಾಶ್ಮೀರದವರಾಗಿದ್ದಾರೆ.

ತಡರಾತ್ರಿ ಹೇಳಿಕೆ ಬಿಡುಗಡೆ ಮಾಡಿರುವ ಮಾತಾ ವೈಷ್ಣೋ ದೇವಿ ದೇವಾಲಯ ಮಂಡಳಿ, ಪ್ರಯಾಣಿಕರ ಎರಡು ಗುಂಪುಗಳ ನಡುವೆ ಘರ್ಷಣೆಯಿಂದಾಗಿ ನೂಕು ನುಗ್ಗಲಿನ ದುರಾದೃಷ್ಟಕರ ಘಟನೆ ನಡೆದಿದೆ ಎಂದು ತಿಳಿಸಿದೆ.

ಮೃತರಲ್ಲಿ ಹತ್ತು ಜನರು ಪುರುಷರು ಹಾಗೂ ಇಬ್ಬರು ಮಹಿಳೆಯರಾಗಿದ್ದಾರೆ. ಘಟನೆಯಲ್ಲಿ 16 ಜನ ಗಾಯಗೊಂಡಿದ್ದಾರೆ. ಇವರಲ್ಲಿ ಒಂಭತ್ತು ಜನರು ಗುಣಮುಖರಾದ ನಂತರ ಬಿಡುಗಡೆ ಮಾಡಲಾಗಿದೆ. ಉಳಿದವರು ಇನ್ನೂ ಚಿಕಿತ್ಸೆಯಲ್ಲಿದ್ದಾರೆ.

ಕೊರೊನಾ ನಿಯಮಗಳನ್ನು ಉಲ್ಲಂಘಿಸಿ ಭಾರೀ ಸಂಖ್ಯೆಯಲ್ಲಿ ಭಕ್ತಾದಿಗಳಿಗೆ ಅವಕಾಶ ನೀಡಲಾಗಿತ್ತು. ಜಮ್ಮು ಮತ್ತು ಕಾಶ್ಮೀರ ಸರ್ಕಾರದ ಆಡಳಿತದ ಅವ್ಯವಸ್ಥೆ ಘಟನೆಗೆ ಕಾರಣ ಎಂದು ಕೆಲ ಭಕ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದರೆ, ದೇವಾಲಯದ ಆಡಳಿತ ಮಂಡಳಿ ಆರೋಪವನ್ನು ನಿರಾಕರಿಸಿದ್ದು, ಹೆಚ್ಚಿನ ಜನಸಂದಣಿ ಉಂಟಾಗುವ ಹಿನ್ನೆಲೆಯಲ್ಲಿ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲಾಗಿತ್ತು ಎಂದು ತಿಳಿಸಿದೆ.

ಜಮ್ಮು ಮತ್ತು ಕಾಶ್ಮೀರ ಆಡಳಿತ ಮೃತರ ಕುಟುಂಬಗಳಿಗೆ ತಲಾ ಹತ್ತು ಲಕ್ಷ ರೂ. ಹಾಗೂ ಗಾಯಗೊಂಡವರಿಗೆ 2 ಲಕ್ಷ ರೂ. ಪರಿಹಾರ ಪ್ರಕಟಿಸಿದೆ.

ಪ್ರಧಾನ ಮಂತ್ರಿ ಕಚೇರಿ ಮೃತರ ಕುಟುಂಬಗಳಿಗೆ ತಲಾ 2 ಲಕ್ಷ ರೂ. ಹಾಗೂ ಗಾಯಗೊಂಡವರಿಗೆ 50 ಸಾವಿರ ರೂ. ನೆರವು ಪ್ರಕಟಿಸಿದೆ. ಉತ್ತರ ಪ್ರದೇಶ ಸರ್ಕಾರ ಸಹ ಮೃತರ ಕುಟುಂಬಗಳಿಗೆ ತಲಾ 2 ಲಕ್ಷ ರೂ. ಪರಿಹಾರ ಪ್ರಕಟಿಸಿದೆ.

## ಅತಿಥಿ ಉಪನ್ಯಾಸಕರ ಖಾಯಂ ಇಲ್ಲ

ಬೆಂಗಳೂರು, ಜ. 1 - ಅತಿಥಿ ಉಪನ್ಯಾಸಕರನ್ನು ನೇರವಾಗಿ ಖಾಯಂ ಮಾಡುವುದು ಸಾಧ್ಯವಿಲ್ಲವೆಂದು ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ್‌ನಾರಾಯಣ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಖಾಯಂ ಮಾಡಲು ಉಮಾದೇವಿ ಪ್ರಕರಣದ ತೀರ್ಪು ಅಡಚಣೆಯಾಗಿದೆ ಎಂದಿದ್ದಾರೆ. ಆದರೂ ನಾವು ಈ ಉಪನ್ಯಾಸಕರಿಗೆ ಕೊರೊನಾ ಸಮಯದಲ್ಲಿ (2ನೇ ಪುಟಕ್ಕೆ)

## ಒಂದೇ ದಿನ 22,775 ಸೋಂಕಿತರು ಪತ್ತೆ

ನವದೆಹಲಿ, ಜ. 1 – ದೇಶದಲ್ಲಿ ಶನಿವಾರ 22,775 ಕೊರೊನಾ ಸೋಂಕಿತರು ಪತ್ತೆಯಾಗಿದ್ದಾರೆ. ಕಳೆದ ಅಕ್ಟೋಬರ್ 6ರ ನಂತರ ಇಷ್ಟೊಂದು ಸಂಖ್ಯೆ ಸೋಂಕಿತರು ಪತ್ತೆಯಾಗಿರುವುದು ಇದೇ ಮೊದಲು. ಇದೇ (4ನೇ ಪುಟಕ್ಕೆ)

## ಡಿಸೆಂಬರ್‌ನಲ್ಲಿ 1.29 ಲಕ್ಷ ಕೋಟಿ ಜಿಎಸ್‌ಟಿ

ನವದೆಹಲಿ, ಜ. 1 – ಡಿಸೆಂಬರ್ 2021ರಲ್ಲಿ ಜಿ.ಎಸ್.ಟಿ. ಸಂಗ್ರಹ 1.29 ಲಕ್ಷ ಕೋಟಿ ರೂ.ಗಳಷ್ಟಾಗಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.13ರಷ್ಟು ಹೆಚ್ಚಾಗಿದೆ. ಆದರೆ, ನವೆಂಬರ್‌ನಲ್ಲಿ 1.31 ಲಕ್ಷ ಕೋಟಿ ರೂ. ಜಿ.ಎಸ್.ಟಿ. ಸಂಗ್ರಹವಾಗಿತ್ತು. ಕಳೆದ ಆರು (2ನೇ ಪುಟಕ್ಕೆ)


## ಒಂಭತ್ತನೇ ವರ್ಷದ ಪುಣ್ಯಸ್ಮರಣೆ



ದಿ|| ನ್ಯಾಮತಿ ಎಸ್. ವೀರಣ್ಣನವರು

ಜನನ : 13.05.1950, ನಿಧನ : 02.01.2013

ಖ್ಯಾತ ವರ್ತಕರು ಹಾಗೂ ಸಂತೋಷ್ ವಿಡಿಯೋ ಮಾಲೀಕರು,

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

ಪತ್ನಿ : ನ್ಯಾಮತಿ ಶಿವಲೀಲಾ ಮತ್ತು

ಮಕ್ಕಳಾದ : ಸಂತೋಷ್‌ಕುಮಾರ್, ಆಶಾರಾಣಿ, ಉಷಾರಾಣಿ,

ಸಂತೋಷ್ ವಿಡಿಯೋ ಸಿಬ್ಬಂದಿ ವರ್ಗದವರು

ಹಾಗೂ ಬಂಧು-ಮಿತ್ರರು, ದಾವಣಗೆರೆ.








## ನಮ್ಮ ಆಸ್ಪತ್ರೆಯ ವಾರ್ಷಿಕೋತ್ಸವ

### ಶಿವಕೃಪ ಗ್ಯಾಸ್ಟ್ರೋಕೇರ್ & ಎಂಡೋಸ್ಕೋಪಿ ಸೆಂಟರ್ ಹಾಗೂ ಅನಿಕಾ ಡಯಾಗ್ನೋಸ್ಟಿಕ್ ಸೆಂಟರ್

ನಮ್ಮ ಆಸ್ಪತ್ರೆಯ ಯಶಸ್ಸಿಗೆ ಸದಾ ಜೊತೆಯಾಗಿ ಬೆಂಬಲಿಸುತ್ತಾ ಬಂದಿರುವ ನಿಮಗೆ ಧನ್ಯವಾದಗಳು.
2022ರ ಹೊಸ ವರ್ಷ ನಿಮ್ಮೆಲ್ಲರಿಗೂ ಆರೋಗ್ಯ ಹಾಗೂ ನೆಮ್ಮದಿಯನ್ನು ತರಲಿ ಎಂದು ಹಾರೈಸುತ್ತೇವೆ.
ನಮ್ಮ ಆಸ್ಪತ್ರೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಗ್ಯಾಸ್ಟ್ರೋಇಂಟೆಸ್ಟಿನಲ್, ಲಿವರ್, ಪ್ಯಾನ್‌ಕ್ರಿಯಾಟಿಕ್ ಸಂಬಂಧಿಸಿದ ರೋಗಿಗಳಿಗೆ
**ದಿನಾಂಕ : 03, 04 ಹಾಗೂ 05 ಜನವರಿ 2022 ರಂದು ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದೆ.**
ಈ ಶಿಬಿರದಲ್ಲಿ ಸಮಾಲೋಚನೆ, ರಕ್ತ ತಪಾಸಣೆ ಹಾಗೂ ಅಲ್ಟ್ರಾಸೌಂಡ್ ಸ್ಕ್ಯಾನ್‌ಗಳನ್ನು ವಿನಾಯಿತಿ ದರದಲ್ಲಿ ಕೈಗೊಳ್ಳಲಾಗುವುದು. ಈ ಸಂದರ್ಭವನ್ನು ಸದುಪಯೋಗಪಡಿಸಿಕೊಳ್ಳಿ ಹಾಗೂ ನಮ್ಮ ಯಶೋಗಾಥೆಯಲ್ಲಿ ಜೊತೆಯಾಗಿರಿ ಎಂದು ಮನವಿ ಮಾಡಿಕೊಳ್ಳುತ್ತೇವೆ.

ಡಾ|| ಅರವಿಂದ ಕೆ.ಎನ್., ಎಂ.ಎಸ್., ಎಂ.ಸಿಹೆಚ್ (ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ)
ಜಿ.ಐ. ಆಂಕೋಸರ್ಜರಿ ಪರಿಣಿತರು (ಟಿ.ಎಂ.ಹೆಚ್. ಮುಂಬೈ)
**ಶಿವಕೃಪ ಗ್ಯಾಸ್ಟ್ರೋಕೇರ್ ಅಂಡ್ ಎಂಡೋಸ್ಕೋಪಿ ಸೆಂಟರ್**
4ನೇ ಮೇನ್ ರಸ್ತೆ, 9ನೇ ಕ್ರಾಸ್, ಸರ್.ಎಂ. ವಿಶ್ವೇಶ್ವರಯ್ಯ ಪಾರ್ಕ್ ಹಿಂಭಾಗ,
ನಂದಿ ಆಸ್ಪತ್ರೆ ಪಕ್ಕ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋ. : 90192 06569

ವಿಂಗ್ ಕಮಾಂಡರ್ ಡಾ|| ಡಿ. ದಿವಾಕರ್, ಎಂ.ಬಿ.ಬಿ.ಎಸ್, ಡಿಎನ್‌ಬಿ
(ರೇಡಿಯೋಡಯಾಗ್ನಸಿಸ್) (ದೆಹಲಿ)ರೇಡಿಯಾಲಜಿಸ್ಟ್ ಸಲಹಾ ವೈದ್ಯರು
**ಅನಿಕಾ ಡಯಾಗ್ನೋಸ್ಟಿಕ್ ಸೆಂಟರ್**
# 2937/5, 5ನೇ ಮೇನ್, 3ನೇ ಕ್ರಾಸ್, ಎಂ.ಸಿ.ಸಿ. "ಬಿ" ಬ್ಲಾಕ್,
ಮಾಮಾಸ್ ಜಾಯಿಂಟ್ ರೋಡ್, ದಾವಣಗೆರೆ-4. ಫೋ. : 63617 73799
AnikaA DIAGNOSTIC CENTRE

ಈ ಶಿಬಿರದಲ್ಲಿ ಭಾಗವಹಿಸಲಿಚ್ಛಿಸುವವರು ಮುಂಚಿತವಾಗಿ ಹೆಸರು ನೋಂದಾಯಿಸಿ : 90192 06569

# ಉತ್ತಮ ತಾಯಂದಿರಿಲ್ಲದ ಮನೆತನಕ್ಕೆ ಸಂಸ್ಕಾರ ಸಿಗುವುದಿಲ್ಲ

## 'ವರ್ಷದ ಹರ್ಷ' ಕಾರ್ಯಕ್ರಮದಲ್ಲಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಸಾಣೇಹಳ್ಳಿ, ಜ.1- ತಾಯಿ ಸಂಸ್ಕೃತಿಯ ಪ್ರತೀಕ. ಒಂದು ಮನೆತನವನ್ನು ಅಭಿವೃದ್ಧಿಪಡಿಸುವ ಹೊಣೆಗಾರಿಕೆ ತಾಯಂದಿರದು. ಯಾವ ಮನೆಯಲ್ಲಿ ಉತ್ತಮ ತಾಯಂದಿರು ಇರುವುದಿಲ್ಲವೋ ಆ ಮನೆತನಕ್ಕೆ ಸಂಸ್ಕಾರ ಸಿಗುವುದಿಲ್ಲ ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನುಡಿದರು.



ಇಲ್ಲಿನ ಎಸ್.ಎಸ್. ರಂಗಮಂದಿರದಲ್ಲಿ 'ವರ್ಷದ ಹರ್ಷ' ನಿಮಿತ್ತ ಆಯೋಜಿಸಿದ್ದ ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಶ್ರೀಗಳು ಮಾತನಾಡುತ್ತಿದ್ದರು.

ಪ್ರಕೃತಿ ಮಾತೆ ಮುನಿಸಿಕೊಂಡರೆ ಏನೆಲ್ಲ ಅನಾಹುತವಾಗಬಹುದು ಎನ್ನುವುದನ್ನು ಕೊರೊನಾ ತೋರಿಸಿದೆ. ನಮಗೆ ಸಾವೇ ಇಲ್ಲ ಎನ್ನುವಂತೆ ಅಹಂಕಾರದಿಂದ ವರ್ತಿಸುವುದು ಸರಿಯಲ್ಲ. ಪ್ರಕೃತಿ ವರವೂ ಹೌದು; ಶಾಪವೂ ಹೌದು. ಪ್ರಕೃತಿಯನ್ನು ವಿವೇಕದಿಂದ ಬಳಸಿದರೆ ವರ, ಅವಿವೇಕದಿಂದ ವರ್ತಿಸಿದರೆ ಶಾಪ.

ಶರಣರ ಆದರ್ಶಗಳು ಕೇವಲ ಕೇಳುವುದಕ್ಕಷ್ಟೇ ಅಲ್ಲ; ಆಚರಣೆಯಲ್ಲಿ ತರುವ ಪ್ರಯತ್ನ ಮಾಡಬೇಕು. ಶರಣರಿಗೆ ಹೊಸದು-ಹಳೆಯದು ಎನ್ನುವುದು ಇಲ್ಲ. ಪ್ರತಿಕ್ಷಣವೂ ಶರಣರಿಗೆ ಹೊಸತು. ಅಂತೆಯೇ ನಾವೂ ಪ್ರತಿಕ್ಷಣವೂ ಹೊಸ ಮನುಷ್ಯರಾಗಿ ಬದುಕುವ ಪ್ರಯತ್ನ ಮಾಡಬೇಕು ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಮೂಲೆಗದ್ದೆ - ಹೊಸನಗರದ ಶ್ರೀ ಸದಾನಂದ ಶಿವಯೋಗಾಶ್ರಮದ ಶ್ರೀ ಅಭಿನವ ಚನ್ನಬಸವ ಮಹಾಸ್ವಾಮೀಜಿ ಮಾತನಾಡಿ, ಮಕ್ಕಳು ಇಂದು ದುಶ್ಚಟಗಳ ದಾಸರಾಗುತ್ತಿದ್ದಾರೆ. ಅವರನ್ನು ಸರಿದಾರಿಯಲ್ಲಿ ತರುವ ಕೆಲಸವನ್ನು ಅತ್ಯಂತ ತುರ್ತಾಗಿ ಮಾಡಬೇಕಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರಾದ ಹೆಚ್. ಬಿಲ್ಲಪ್ಪ ಅವರು ಮಾತನಾಡಿ, ಈ ವರ್ಷ ಮಹಾಯುದ್ಧ ನಡೆದರೂ ಆಗದ ಸಾವು-ನೋವು ಆರ್ಥಿಕ ಹಾನಿ ಕೋವಿಡ್‌ನಿಂದ ಉಂಟಾಗಿದೆ ಎಂದರು.

ಮನುಷ್ಯ - ಮನುಷ್ಯರ ಸಂಬಂಧಗಳು ಶಿಥಿಲಗೊಳ್ಳುತ್ತಿರುವ ಮತ್ತು ನಶಿಸುತ್ತಿರುವ ಸಾಮಾಜಿಕ ಮೌಲ್ಯಗಳ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗಿದೆ. ಕೋವಿಡ್ ಹರಡದಂತೆ ಎಲ್ಲರೂ ಎಚ್ಚರಿಕೆ ವಹಿಸಬೇಕು. ಜೀವ ಇದ್ದರೆ ಜೀವನ ಎನ್ನುವ ಸತ್ಯ ನಮಗೆ ಕೋವಿಡ್‌ನಿಂದ ಅರಿವಾಗಿದೆ ಎಂದರು.

ಶ್ರೀ ಗುರುಪಾದೇಶ್ವರ ಪ್ರೌಢಶಾಲೆಯ ಸ್ಥಳೀಯ ಸಲಹಾ ಸಮಿತಿಯ ಅಧ್ಯಕ್ಷ ಎ. ಸಿ. ಚಂದ್ರಣ್ಣ ಮತ್ತು ಹೊಸದುರ್ಗ ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಎಸ್. ಸಿದ್ದಪ್ಪ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಾಣೇಹಳ್ಳಿಯ ಅಕ್ಕನ ಬಳಗದ ಸದಸ್ಯೆಯರು ಮತ್ತು ಶಿವಸಂಚಾರದ ಕೆ. ಜ್ಯೋತಿ, ಕೆ. ದಾಕ್ಷಾಯಣಿ ಹಾಗೂ ಹೆಚ್. ಎಸ್. ನಾಗರಾಜ್ ತಂಡದವರು ವಚನ ಗೀತೆ, ಜಾಗೃತ ಗೀತೆ, ಗೀಗೀ ಪದ ಮತ್ತು ಜನಪದ ಗೀತೆಗಳನ್ನು ಹಾಡಿದರು. ರಂಗಶಾಲೆಯ ಪ್ರಾಚಾರ್ಯ ಜಗದೀಶ್ ಆರ್. ಮತ್ತು ತಂಡದವರು ರಂಗ ಗೀತೆಗಳನ್ನು ಹಾಡಿದರು.

ಪ್ರೊ. ಜಿ. ಹೆಚ್. ಹನ್ನೆರಡುಮಠ ರಚಿತ ನಟರಾಜ್ ಹೊನ್ನವಳ್ಳಿ ನಿರ್ದೇಶನದ 'ಕಲ್ಯಾಣವೆಂಬ ಪ್ರಣತೆ' ನಾಟಕವನ್ನು ಸಾಣೇಹಳ್ಳಿಯ ಅಕ್ಕನ ಬಳಗದವರು ಮತ್ತು ಹೂಲಿ ಶೇಖರ್ ರಚಿತ ವೈ. ಡಿ. ಬದಾಮಿ ನಿರ್ದೇಶನದ, ಹೆಚ್. ಎಸ್. ನಾಗರಾಜ್ ಮತ್ತು ಶರಣ್ ಸಂಗೀತ ನೀಡಿದ 'ಕರಿಯು ಕನ್ನಡಿಯೊಳಗೆ' ನಾಟಕವನ್ನು ಸಾಣೇಹಳ್ಳಿಯ ಶ್ರೀ ಶಿವಕುಮಾರ ಕಲಾಸಂಘದ ಸದಸ್ಯರು ಅಭಿನಯಿಸಿದರು.

ವಿದ್ಯಾರ್ಥಿಗಳಾದ ಸುಪ್ರಭೆ ಡಿ. ಎಸ್. ಮತ್ತು ಮುಕ್ತಾ ಡಿ. ಜೆ. ನಿರೂಪಿಸಿದರು.

> **ಶಾಪ ಹಾಕುವ ಶಕ್ತಿ ಸ್ವಾಮಿಗಳಿಗಿಲ್ಲ.**
>
> ಯಾವ ಸ್ವಾಮಿಗಳಿಗೂ ವರ ಅಥವಾ ಶಾಪವನ್ನು ಕೊಡಲು ಸಾಧ್ಯವಿಲ್ಲ. ಸ್ವಾಮಿಗಳಾದವರೂ ಸಹ ಸೊಳ್ಳೆಗಳಿಗೆ ಹೆದರಿ ಸೊಳ್ಳೆ ಪರದೆ ಕಟ್ಟಿಕೊಂಡು ಮಲಗುತ್ತೇವೆ. ಅಂಥದ್ದರಲ್ಲಿ, ಇತ್ತೀಚೆಗೆ ಸ್ವಾಮಿಗಳೊಬ್ಬರು ಶಾಪ ಹಾಕಿ ಮುಖ್ಯಮಂತ್ರಿಯೊಬ್ಬರನ್ನು ಕೆಳಗಿಳಿಸುತ್ತೇವೆ ಎಂದರು. ಇದು ಅವರ ಅಜ್ಞಾನದ ಪರಮಾವಧಿ.
>
> **- ಸಾಣೇಹಳ್ಳಿ ಶ್ರೀಗಳು**

> **ಸಂವಿಧಾನ ಗೌರವಿಸದಿದ್ದರೆ ತೊಂದರೆ ಅನುಭವಿಸಬೇಕಾಗುತ್ತದೆ**
>
> ಕಾಯಕ ನಮ್ಮ ಆಯ್ಕೆ ಮತ್ತು ಅದರಲ್ಲಿ ಶ್ರದ್ಧೆ ಹಾಗೂ ಆತ್ಮಗೌರವವಿರಬೇಕು. ಈ ಮೌಲ್ಯವೇ ಸಂವಿಧಾನದಲ್ಲಿ ಅಡಗಿದೆ. ನಮ್ಮ ಕಾನೂನುಗಳನ್ನು, ಸಂವಿಧಾನವನ್ನು, ರಾಷ್ಟ್ರ ಲಾಂಛನಗಳನ್ನು ನಾವು ಗೌರವಿಸದಿದ್ದರೆ ತುಂಬಾ ತೊಂದರೆ ಅನುಭವಿಸಬೇಕಾಗುತ್ತದೆ.
>
> **- ವಿಶ್ರಾಂತ ನ್ಯಾಯಾಧೀಶ ಹೆಚ್. ಬಿಲ್ಲಪ್ಪ**

# ನಾಟಕಗಳಲ್ಲಿರಲಿದೆ ನೈಜತೆ

**(1ನೇ ಪುಟದಿಂದ)** ನಾಗಿದ್ದೇನೆ. ಮನುಷ್ಯ ಹೇಗೆ ಬದುಕಬೇಕೆಂದು ನಾಟಕ ಸಂಸ್ಕೃತಿ ತಿಳಿಸುತ್ತದೆ ಎಂದರು.

2021ನೇ ಸಾಲಿನ ಶಿಮುಶ ರಾಷ್ಟ್ರೀಯ ನಾಟಕ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಚಲನಚಿತ್ರ ನಟಿ ಶ್ರೀಮತಿ ತಾರಾ ಅನುರಾಧ, ಶ್ರೀಮಠವು ಕಲಾವಿದರನ್ನು ತಯಾರಿಸುವ ಕ್ಷೇತ್ರವಾಗಿದೆ. ಕಲೆಗಳ ಬೀಡು ಚಿತ್ರದುರ್ಗ. ಇದೇ ಪ್ರಥಮ ಬಾರಿಗೆ ಕಲಾವಿದರಿಗೆ ಬಣ್ಣ ಹಚ್ಚುವ ಮೂಲಕ ನಾಟಕಕ್ಕೆ ಚಾಲನೆ ನೀಡಿದ್ದು ವಿಶೇಷ. ರಾಜ್ಯದ ಅನೇಕ ನಾಟಕಗಳನ್ನು ಇಲ್ಲಿಂದಲೇ ಆರಂಭಿಸಬೇಕು ಎಂದು ನಾಟಕ ಅಧ್ಯಕ್ಷರಿಗೆ ಹೇಳಿದರು.

ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ ಮಾತನಾಡಿ, ಬಸವಣ್ಣನವರ ತತ್ವಗಳನ್ನು ಇಂದು ನಾವು ಪಾಲಿಸಬೇಕು. ಶ್ರೀಮಠ ಬಸವ ತತ್ವದ ಹಿನ್ನೆಲೆಯಲ್ಲಿ ನಡೆಯುತ್ತಿದೆ. ಎಲ್ಲ ಜಾತಿ, ಜನಾಂಗಗಳನ್ನು ಒಪ್ಪಿಕೊಳ್ಳುವ ಮಠ ಇದು. ಬಸವಣ್ಣನವರ ಕಾಲದ ಅನುಭವ ಮಂಟಪದ ಕಾರ್ಯಕಲಾಪಗಳು ಇಂದು ಮುರುಘಾ ಮಠದ ಅನುಭವ ಮಂಟಪದಲ್ಲಿ ನಡೆಯುತ್ತಿವೆ ಎಂದರು.

ನಂತರ, ಡಾ. ಶಿವಮೂರ್ತಿ ಮುರುಘಾ ಶರಣರ ರಚನೆ ಮತ್ತು ಎಲ್. ಕೃಷ್ಣಪ್ಪ ನಿರ್ದೇಶಿಸಿರುವ ಅವಿರಳ ಜ್ಞಾನಿ ಚೆನ್ನಬಸವಣ್ಣ ನಾಟಕವನ್ನು ಜಮುರಾ ಸುತ್ತಾಟ ತಂಡದವರು ಅಭಿನಯಿಸಿದರು.

ಜಮುರಾ ಕಲಾವಿದರು ವಚನ ಪ್ರಾರ್ಥನೆ ಮಾಡಿದರು. ಶ್ರೀಮತಿ ಸುಮಾ ರಾಜಶೇಖರ್ ಸ್ವಾಗತಿಸಿದರು. ಶ್ರೀಮತಿ ಆಶಾರಾಣಿ ನಿರೂಪಿಸಿದರು.

# ಅತಿಥಿ ಉಪನ್ಯಾಸಕರ ಖಾಯಂ ಇಲ್ಲ

**(1ನೇ ಪುಟದಿಂದ)** ವೇತನ ಕೊಟ್ಟಿದ್ದೇವೆ. ಮುಷ್ಕರ ನಿರತರು ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ಸರ್ಕಾರ ಅತಿಥಿ ಉಪನ್ಯಾಸಕರ ಪರವಾಗಿಯೇ ಇದ್ದು, ಅವರ ವೇತನವನ್ನು ಹೆಚ್ಚಿಸುವ ಬಗ್ಗೆ ಚರ್ಚಿಸುತ್ತಿದೆ. ಸಂಬಂಧಿತ ಸಮಿತಿಯ ವರದಿ ಬಂದ ಕೂಡಲೇ ಸಾಧ್ಯವಿರುವ ಎಲ್ಲ ಪರಿಹಾರ ಕ್ರಮಗಳನ್ನೂ ತೆಗೆದುಕೊಳ್ಳಲಾಗುವುದು. ತಕ್ಷಣ ಮುಷ್ಕರ ಕೈಬಿಟ್ಟು ಕೆಲಸಕ್ಕೆ ಹಾಜರಾಗಬೇಕು ಎಂದು ಕರೆ ನೀಡಿದರು. ಸರ್ಕಾರಿ ಕಾಲೇಜುಗಳಲ್ಲಿ ಕಡಿಮೆ ಉಪನ್ಯಾಸಕರು ಇದ್ದ ಕಾರಣಕ್ಕೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗಿದೆ. ಆದರೆ ಇವರು ಸರ್ಕಾರದ ಗಮನಕ್ಕೆ ತಾರದೆಯೇ ಮುಷ್ಕರಕ್ಕೆ ಇಳಿದಿರುವುದು ಸರಿಯಲ್ಲ ಎಂದು ಸಚಿವರು ಬೇಸರ ವ್ಯಕ್ತಪಡಿಸಿದರು.

# ಖಾತೆಗಳಿಗೆ 20 ಸಾವಿರ ಕೋಟಿ

**(1ನೇ ಪುಟದಿಂದ)** ಅನುಷ್ಠಾನಗೊಳಿಸಿದ್ದು, ಯೋಜನೆಯಡಿ ವಾರ್ಷಿಕ ರೂ 6000 ರೂ.ಗಳ ಆರ್ಥಿಕ ನೆರವನ್ನು ಅರ್ಹ ರೈತರ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮೂಲಕ ನೀಡಲಾಗುತ್ತಿದೆ.

ಈ ಅನುದಾನ ವನ್ನು 2000 ರೂ.ಗಳಂತೆ 3 ಕಂತುಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ಇದನ್ನು ನೀಡಲಾಗುತ್ತಿದೆ. 2850 ಕೋಟಿ 54 ಲಕ್ಷ ರೂ.ಗಳಷ್ಟು ಕರ್ನಾಟಕ ಸರ್ಕಾರದಿಂದ ಹೆಚ್ಚುವರಿಯಾಗಿ ರೈತರಿಗೆ ಹಣ ಪಾವತಿಯಾಗಿದೆ.

ಸಾಧ್ಯವಾದಷ್ಟು ಈ ಯೋಜನೆಯಡಿ ಎಲ್ಲಾ ಪಾವತಿಗಳನ್ನು ಆಧಾರ್ ಆಧಾರಿತ ಡಿಬಿಟಿ ಮುಖಾಂತರ ಮಾಡಬೇಕೆಂದು ಸೂಚಿಸಲಾಗಿದ್ದು, ಎಲ್ಲಾ ರಾಜ್ಯಗಳ ಪೈಕಿ , ಕರ್ನಾಟಕ ರಾಜ್ಯವು ಅತಿ ಹೆಚ್ಚು ಶೇಕಡಾವಾರು ಆಧಾರ್ ಆಧಾರಿತ ವಹಿವಾಟುಗಳನ್ನು ಅತ್ಯುತ್ತಮವಾಗಿ ನಿರ್ವಹಿಸಿದ ಹಿನ್ನೆಲೆಯಲ್ಲಿ 2021ರ ವರ್ಷದ ಫೆಬ್ರವರಿಯಲ್ಲಿ ಭಾರತ ಸರ್ಕಾರದಿಂದ ಕರ್ನಾಟಕ ರಾಜ್ಯಕ್ಕೆ ಪ್ರಶಸ್ತಿ ಸಹ ದೊರೆತಿದೆ. ನಿರಂತರ ಮೇಲ್ವಿಚಾರಣೆಯ ಭಾಗವಾಗಿ ಯೋಜನೆಯ ಫಲಾನುಭವಿಗಳಾಗಿರುವ ರೈತ ಕುಟುಂಬಗಳ ಅರ್ಹತೆಯನ್ನು ರಾಜ್ಯದಿಂದ ಆಗಿಂದಾಗ್ಗೆ ಪರಿಶೀಲಿಸಲಾಗುತ್ತಿದೆ.

# ಕೆಟಿಜೆ ನಗರದಲ್ಲಿ ಇಂದು ಕಾರ್ತಿಕ

ದಾವಣಗೆರೆ ಕೆಟಿಜೆ ನಗರ 2ನೇ ಕ್ರಾಸ್ ನಲ್ಲಿರುವ ಶ್ರೀ ಗುರು ರೇವಣಸಿದ್ದೇಶ್ವರ, ಆಂಜನೇಯ ಸ್ವಾಮಿ, ಮಹಾಗಣಪತಿ ಶನೇಶ್ವರ ನವಗ್ರಹ ಹಾಗೂ ದುರ್ಗಾದೇವಿಯ ಇಂದು ರಾತ್ರಿ 8.30ಕ್ಕೆ ಕಾರ್ತಿಕ ದೀಪೋತ್ಸವ ಹಾಗೂ ಧನುರ್ಮಾಸದ ಪ್ರಯುಕ್ತ ರುದ್ರಾಭಿಷೇಕ, ವಿಶೇಷ ಅಲಂಕಾರ, ಮಹಾಮಂಗಳಾರತಿ ಪೂಜಾ ಕಾರ್ಯಕ್ರಮವಿರುತ್ತದೆ.

# ಭರವಸೆಯೊಂದಿಗೆ 2022ಕ್ಕೆ ಸ್ವಾಗತ



ಜಿಲ್ಲಾಧಿಕಾರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಕೇಕ್ ಕತ್ತರಿಸುವ ಮೂಲಕ ಹೊಸ ವರ್ಷವನ್ನು ಸ್ವಾಗತಿಸಿದರು.

**(1ನೇ ಪುಟದಿಂದ)** ಬಂದಿದ್ದರೆ, ಸ್ನೇಹಿತರ ಗುಂಪು, ನೌಕರರ ವರ್ಗ ಹೀಗೆ ಗುಂಪು ಗುಂಪಾಗಿ ವರ್ಷದ ಅಂಗವಾಗಿ ಭೋಜನ ಕೂಟಕ್ಕೆ ಆಗಮಿಸಿದ್ದರು.

**ಬೆಣ್ಣೆ ದೋಸೆ ಪಾರ್ಟಿ:** ಬೆಳಿಗ್ಗೆ ಹಾಗೂ ಸಂಜೆ ಸ್ನೇಹಿತರು ಹಾಗೂ ಕುಟುಂಬದವರು ಬೆಣ್ಣೆ ದೋಸೆ ಸವಿಯಲು ಆಗಮಿಸಿದ್ದರು. ಹೊಸ ವರ್ಷದ ಅಂಗವಾಗಿ ಸಂಜೆ ಬೆಣ್ಣೆ ದೋಸೆ ಹೋಟೆಲ್‌ಗಳು ಭರ್ತಿಯಾಗಿದ್ದವು. ಪೌರ ಕಾರ್ಮಿಕರ ತಂಡವೊಂದು ಮುಂಜಾನೆ ಬೆಣ್ಣೆ ದೋಸೆಯೊಂದಿಗೆ ಸಂಭ್ರಮಿಸುತ್ತಿದ್ದುದು ಕಂಡು ಬಂತು.

**ಮುಂದುವರಿದ ಕೇಕ್ ಖರೀದಿ:** ಶುಕ್ರವಾರ ಸಂಜೆಯಿಂದ ಹೆಚ್ಚಾಗಿದ್ದ ಕೇಕ್ ಖರೀದಿ ಭರಾಟೆ ಶನಿವಾರವೂ ಮುಂದುವರೆದಿತ್ತು. ಯುವಕ-ಯುವತಿಯರು, ಕಚೇರಿಗಳ ಸಿಬ್ಬಂದಿಗಳು ಬೇಕರಿಗಳಲ್ಲಿ ಕೇಕ್ ಖರೀದಿಸಿ ಕೊಂಡೊಯ್ಯುತ್ತಿದ್ದುದು ಕಂಡು ಬಂತು. ನ್ಯೂ ಇಯರ್ ಹಿನ್ನೆಲೆಯಲ್ಲಿ ಚರ್ಚ್‌ಗಳಲ್ಲಿ ವಿಶೇಷ ಪ್ರಾರ್ಥನೆಗಳು ನಡೆದವು. ದೇವಾಲಯಗಳಿಗೂ ತೆರಳಿ ಹೊಸ ವರ್ಷ ಸುಖಕರವಾಗಿರಲಿ ಎಂದು ಜನತೆ ಪ್ರಾರ್ಥಿಸಿದರು.

# ಮದ್ಯದ ವಹಿವಾಟು ಕುಸಿತ

**(1ನೇ ಪುಟದಿಂದ)** ಗಂಟೆಗೂ ಮೊದಲೇ ಪೊಲೀಸರು ನಗರದಲ್ಲಿ ಸಂಚರಿಸಿ 10 ಗಂಟೆಗೆ ವ್ಯವಹಾರ ಸ್ಥಗಿತಗೊಳಿಸುವಂತೆ ಎಚ್ಚರಿಕೆ ನೀಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಮದ್ಯದ ವಹಿವಾಟು ಬಹುತೇಕ 10ರ ವೇಳೆಗೆ ಸ್ಥಗಿತವಾಯಿತು. ಆದಾಗ್ಯೂ ಕದ್ದು ಮುಚ್ಚಿ ಹೆಚ್ಚಿನ ದರಕ್ಕೆ ಮದ್ಯ ಮಾರಾಟ ನಡೆದ ಬಗ್ಗೆಯೂ ಮಾತುಗಳು ಕೇಳಿ ಬಂದವು.

ಕಳೆದ ವರ್ಷ ಡಿಸೆಂಬರ್ ಮಾಹೆಯಲ್ಲಿ 71,148 ಬಾಕ್ಸ್ ಬಿಯರ್ ಮಾರಾಟವಾಗಿತ್ತು. ಆದರೆ ಈ ವರ್ಷ ಕೇವಲ 65,263 ಬಾಕ್ಸ್ ಮಾರಾಟವಾಗಿದೆ. 1,63,521 ಬಾಕ್ಸ್ ಇತರೆ ಮಾರಾಟವಾಗಿತ್ತು. ಈ ವರ್ಷ 1,63,572 ಬಾಕ್ಸ್ ಮದ್ಯ ಮಾರಾಟವಾಗಿದೆ ಎಂದು ಅಬಕಾರಿ ನಿರೀಕ್ಷಕ ಶಿವಪ್ರಸಾದ್ ಪತ್ರಿಕೆಗೆ ತಿಳಿಸಿದ್ದಾರೆ.

ಒಟ್ಟಾರೆ ರಾತ್ರಿ ಕರ್ಫ್ಯೂ ಹಿನ್ನೆಲೆಯಲ್ಲಿ ರಾತ್ರಿ 10 ಗಂಟೆಗೆ ಬಾರ್ ವಹಿವಾಟು ಸ್ಥಗಿತಗೊಂಡ ಕಾರಣ ಹೊಸ ವರ್ಷದ ದಿನ ಸಂಭ್ರಮಾಚರಣೆಯಲ್ಲಿ ಮದ್ಯದ ವಹಿವಾಟು ಕುಸಿತ ಕಂಡಿದೆ ಎಂದವರು ಹೇಳಿದರು.

# ರಾಣೇಬೆನ್ನೂರು - ಹರಿಹರ ಎರಡು ಕಣ್ಣುಗಳಿದ್ದಂತೆ

## ತುಂಗಾರತಿ ಸಮಾರಂಭದ ಪತ್ರಿಕಾಗೋಷ್ಠಿಯಲ್ಲಿ ರಾಣೇಬೆನ್ನೂರು ಶಾಸಕ ಅರುಣ್‌ಪೂಜಾರ್

ರಾಣೇಬೆನ್ನೂರು, ಜ.1- ರಾಣೇಬೆನ್ನೂರು ಹಾಗೂ ಹರಿಹರ ತಾಲ್ಲೂಕುಗಳು ನಮಗೆ ಎರಡು ಕಣ್ಣುಗಳಿದ್ದಂತೆ. ತುಂಗಭದ್ರೆಯ ಎರಡು ತೀರದಲ್ಲಿ ತುಂಗಾರತಿ ನಡೆದರೆ ನಮ್ಮಿಂದ ಸಾಧ್ಯವಾಗುವ ಸೇವೆಯನ್ನು ಮಾಡುತ್ತೇವೆ ಎಂದು ಶಾಸಕ ಅರುಣ್‌ಕುಮಾರ್ ಪೂಜಾರ್ ಹೇಳಿದರು.



ಕೋಡಿಯಾಲ ಹೊಸಪೇಟೆಯ ಪುಣ್ಯಕೋಟಿ ಮಠದಲ್ಲಿ ಈ ತಿಂಗಳ ಅಂತ್ಯದಲ್ಲಿ ನಡೆಯುವ ತುಂಗಾರತಿ ಸಮಾರಂಭ ಕುರಿತು ಇಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಇದು ನಮ್ಮೂರಿನ ಮಠ. ಇದರ ಅಭಿವೃದ್ಧಿ ನಮ್ಮ ಕರ್ತವ್ಯ. ಈಗ ನಮ್ಮದೇ ಸರ್ಕಾರವಿದೆ. ಮಠ ಹಾಗೂ ನದಿ ತೀರದ ಅವಶ್ಯ ಕಾಮಗಾರಿಗಳನ್ನು ಮಾಡಿಸಲು ಶ್ರಮಿಸುತ್ತೇನೆ. ಸಮಾರಂಭದ ಸಂದರ್ಭದಲ್ಲಿ ಗ್ರಾಮದ ಸ್ವಚ್ಛತೆ ಹಾಗೂ ಧಾರ್ಮಿಕ ಸಮಾರಂಭದ ಪೂರಕವಾದ ಕೆಲಸ ಕಾರ್ಯಗಳನ್ನು ನಮ್ಮೂರಿನ ಗ್ರಾಮ ಪಂಚಾಯಿತಿಯವರೇ ಮಾಡುತ್ತಾರೆ ಎಂದು ಶಾಸಕರು ವಿವರಿಸಿದರು.

ನಮ್ಮದು ವೀರಶೈವ ಸಂಪ್ರದಾಯದ ಮಠ. ಜಾತಿ ಸ್ವರೂಪ ತೊರೆದು ಜ್ಯೋತಿ ಸ್ವರೂಪದ ಮಠವಾಗಿಸಿ, ದೇವರ ಆರಾಧನೆ ತೊರೆದು ನಿಸರ್ಗದ ಆರಾಧನೆ ಮಾಡಿದರೆ ಶಾಂತಿ, ಸಮಾಧಾನ ನೆಲೆಸಿ ಲೋಕಕಲ್ಯಾಣವಾಗಲಿದೆ. ದೊಡ್ಡೇರಿ ಗುರುಗಳ ಈ ಮಾರ್ಗದರ್ಶದಂತೆ ನಾವು ನಡೆಯುತ್ತಿದ್ದೇವೆ. ಅವರ ಆಣತಿಯಂತೆ ತುಂಗಾರತಿ ಸಮಾರಂಭ ಆಚರಿಸುತ್ತಿದ್ದೇವೆ ಎಂದು ಶ್ರೀ ಮಠದ ಜಗದೀಶ್ವರ ಸ್ವಾಮೀಜಿ ನುಡಿದರು.

ಗೋಮಾತೆ, ಭೂಮಾತೆ ಹಾಗೂ ಜಲಮಾತೆಯರು ಅಮೂಲ್ಯ ರತ್ನಗಳಿದ್ದಂತೆ. ಅವುಗಳನ್ನು ಗೌರವಿಸಿದರೆ ಅತಿವೃಷ್ಟಿ, ಅನಾವೃಷ್ಟಿಯಂತಹ ಸಂಕಷ್ಟಗಳು ಬರಲಾರವು. ಆ ದಿಶೆಯಲ್ಲಿ ಶ್ರೀ ಜಗದೀಶ್ವರ ಸ್ವಾಮೀಜಿ ಶ್ರಮಿಸುತ್ತಿದ್ದು, ಈ ಭಾಗದ ಜನರ ಜೊತೆಗೆ ಲೋಕ ಕಲ್ಯಾಣ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಾರೆ ಎಂದು ರಾಣೇಬೆನ್ನೂರು ಶ್ರೀ ಶನೇಶ್ವರ ಮಠದ ಶ್ರೀ ಶಿವಯೋಗಿ ಸ್ವಾಮೀಜಿ ಹೇಳಿದರು.

ಭಾರತಿ ಜಂಬಗಿ, ಮಂಗಳಗೌರಿ ಪೂಜಾರ್, ಎಸ್.ಎಸ್. ರಾಮಲಿಂಗಣ್ಣನವರ್, ಚೋಳಪ್ಪ ಕಸವಾಳ, ಮಾಜಿ ಶಾಸಕ ಸೋಮಣ್ಣ ಬೇವಿನಮರದ್, ಬಸವರಾಜ್ ಚಳಗೇರಿ, ಮಂಜುನಾಥ್ ಗೌಡಶಿವಣ್ಣನವರ್, ಸಿದ್ದಪ್ಪ ಚಿಕ್ಕಬಿದರಿ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**1008 ಸೀರೆ ವಿತರಣೆ :** ತುಂಗಾರತಿಯ 3ನೇ ವರ್ಷದ ಸವಿನೆನಪಿಗಾಗಿ 1008 ಮಹಿಳೆಯರಿಗೆ ಸಂಪತ್ತಿನ ಸಂಕೇತವಾದ ಹಸಿರು ಬಣ್ಣದ ಗಾಡಿದಡಿಯ ಇಳಕಲ್ ಸೀರೆಗಳನ್ನು, ಪುರುಷರಿಗೆ ಕೇಸರಿ ವಸ್ತ್ರಗಳನ್ನು ವಿತರಿಸಲಾಯಿತು.

# ಭೂಮಿ ಮಾರಾಟಕ್ಕೆ ನಿರ್ಧಾರ

**(1ನೇ ಪುಟದಿಂದ)** ಉದ್ದಿಮೆದಾರರು ಹಾಗೂ ಹೂಡಿಕೆದಾರರನ್ನು ಕೈ ಬೀಸಿ ಕರೆಯುತ್ತಿದ್ದು, ರಾಜ್ಯದಲ್ಲಿ ಹೂಡಿಕೆದಾರರು ಮತ್ತು ಕೈಗಾರಿಕೋದ್ಯಮಿಗಳಿಗೆ ಹಿಂದೆಂದೂ ಸಿಗದಷ್ಟು ಪ್ರೋತ್ಸಾಹ ಹಾಗೂ ಕೈಗಾರಿಕಾ ಸ್ನೇಹಿ ನಿಯಮಗಳನ್ನು ಜಾರಿಗೊಳಿಸುತ್ತಿದೆ ಎಂದಿದ್ದಾರೆ.

ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಉದ್ದೇಶಿತ ಕೆಐಎಡಿಬಿ ಕಾಯ್ದೆಗೆ ತಿದ್ದುಪಡಿ ಮಾಡುವ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಲಾಗಿದ್ದು, ಇನ್ನು ಮುಂದೆ 10 ವರ್ಷಗಳವರೆಗೆ ಕೈಗಾರಿಕಾ ಉದ್ದೇಶಗಳಿಗೆ ಜಮೀನನ್ನು ಲೀಸ್ ಕಂ ಸೇಲ್‌ಗೆ ನೀಡಲು ಸಮ್ಮತಿಸಲಾಗಿದೆ ಎಂದು ಹೇಳಿದ್ದಾರೆ.

ಹೊಸ ಯೋಜನೆಗೆ ನಿಯಮಗಳನ್ನು ರೂಪಿಸಲಾಗುತ್ತಿದೆ ಮತ್ತು ಒಂದೆರಡು ವಾರಗಳಲ್ಲಿ ಪೂರ್ಣ ಪ್ರಮಾಣದ ಸರ್ಕಾರಿ ಆದೇಶವನ್ನು ಹೊರಡಿಸುವ ನಿರೀಕ್ಷೆಯಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

# ನಗರದಲ್ಲಿಂದು ಕಲಾವಿದರ ಆಡಿಷನ್

ದಾವಣಗೆರೆಯ ವೈಷ್ಣವಿ ಎಂ. ಫಿಲ್ಮ್ ವತಿಯಿಂದ ಒಂದು ಸುಂದರ ವೇದಿಕೆ ಸಿದ್ದವಾಗಿದ್ದು, ಕಿರುಚಿತ್ರ ಹಾಗೂ ಚಲನಚಿತ್ರದಲ್ಲಿ ಅಭಿನಯಿಸಲಿಚ್ಛಿಸುವ ಕಲಾಸಕ್ತರಿಗೆ ಆಡಿಷನ್ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯಾನಗರದ ಶ್ರೀ ಸಾಯಿ ಭವನ ಕನ್ವೆನ್ಷನ್ ಹಾಲ್‌ನಲ್ಲಿ ಏರ್ಪಡಿಸಿದೆ.

ಇಂದು ಆಯ್ಕೆಯಾಗುವ ಕಲಾವಿದರಿಗೆ ತರಬೇತಿಯೊಂದಿಗೆ ಪಾತ್ರ ಕೊಡಲಾಗುವುದು. ಡ್ರಾಮಾ ಜ್ಯೂನಿಯರ್, ಮಜಾ ಭಾರತ, ಕಾಮಿಡಿ ಕಿಲಾಡಿಗಳಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಈ ವೇದಿಕೆ ಒಂದು ಮೆಟ್ಟಿಲಾಗಬಹುದು, ಕೂಡಲೇ ಆಡಿಷನ್‌ನಲ್ಲಿ ಭಾಗವಹಿಸಿ ಎಂದು ರಂಗ ನಿರ್ದೇಶಕ, ಕಿರುತೆರೆ ನಿರ್ವಾಹಕ ಮಂಜುನಾಥ ಹೊಳೆ ಸಿರಿಗೆರೆ (94830-16034) ತಿಳಿಸಿದ್ದಾರೆ.

# ಡಿಸೆಂಬರ್‌ನಲ್ಲಿ 1.29 ಲಕ್ಷ ಕೋಟಿ ಜಿಎಸ್‌ಟಿ

**(1ನೇ ಪುಟದಿಂದ)** ತಿಂಗಳಿಂದ ಜಿ.ಎಸ್.ಟಿ. ಸಂಗ್ರಹ ಲಕ್ಷ ಕೋಟಿ ರೂ.ಗಳಿಗೂ ಹೆಚ್ಚಾಗಿದೆ. 2021ರ ಡಿಸೆಂಬರ್‌ನಲ್ಲಿ 1.29 ಲಕ್ಷ ಕೋಟಿ ರೂ. ಜಿ.ಎಸ್.ಟಿ. ಸಂಗ್ರಹವಾಗಿದೆ. ಸಿ.ಜಿ.ಎಸ್.ಟಿ. 22,578 ಕೋಟಿ ರೂ., 28,658 ಕೋಟಿ ರೂ. ಎಸ್.ಜಿ.ಎಸ್.ಟಿ., 69,155 ಕೋಟಿ ರೂ. ಐ.ಜಿ.ಎಸ್.ಟಿ. ಹಾಗೂ 9,389 ಕೋಟಿ ರೂ. ಸೆಸ್ ಆಗಿದೆ.

ಅಕ್ಟೋಬರ್ - ಡಿಸೆಂಬರ್ ಅವಧಿಯ ಮೂರನೇ ಚತುರ್ಥದಲ್ಲಿ ಪ್ರತಿ ತಿಂಗಳು 1.30 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿದೆ. ಮೊದಲ ಚತುರ್ಥದ ಸರಾಸರಿ 1.10 ಲಕ್ಷ ಕೋಟಿ ರೂ. ಹಾಗೂ ಎರಡನೇ ಚತುರ್ಥದ ಸರಾಸರಿ 1.15 ಲಕ್ಷ ಕೋಟಿ ರೂ. ಆಗಿದೆ.

# ನಗರದಲ್ಲಿ ಇಂದು ಜೀ ಕನ್ನಡ ವಾಹಿನಿ ಸರಿಗಮಪ ಮಹಾ ಆಡಿಷನ್ಸ್

ಜೀ ಕನ್ನಡ ವಾಹಿನಿಯ ಸರಿಗಮಪ ಲಿಟಲ್ ಚಾಂಪ್ಸ್ ಸೀಸನ್-19 ಮತ್ತು ಡ್ರಾಮಾ ಜೂನಿಯರ್ಸ್ ಸೀಸನ್-4 ರ ಮಹಾ ಆಡಿಷನ್ಸ್ ಪ್ರಕ್ರಿಯೆಯು ಇಂದು ಬೆಳಿಗ್ಗೆ 9 ಗಂಟೆಗೆ ಬಿ.ಎಸ್ ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಯಲಿದೆ. ಸರಿಗಮಪ ಲಿಟಲ್ ಚಾಂಪ್ಸ್ ಕಾರ್ಯಕ್ರಮಕ್ಕೆ ಆಡಿಷನ್ ನೀಡಲು ಮಗುವಿನ ವಯಸ್ಸು 4 ರಿಂದ 15 ವರ್ಷದೊಳಗಿರಬೇಕು ಹಾಗು ಡ್ರಾಮಾ ಜೂನಿಯರ್ಸ್ ಆಡಿಷನ್ ನಲ್ಲಿ ಭಾಗವಹಿಸುವ ಮಗುವಿನ ವಯಸ್ಸು 4 ರಿಂದ 14 ವರ್ಷದೊಳಗಿರಬೇಕು.

# ವಾರಣಾಸಿ ಮಾದರಿಯಲ್ಲಿ ತುಂಗಾರತಿ



**(1ನೇ ಪುಟದಿಂದ)** ಸಾಂಸ್ಕೃತಿಕ ಸಂಭ್ರಮ, ವಸ್ತು ಪ್ರದರ್ಶನ ಕಾರ್ಯಕ್ರಮಗಳು ನಡೆಯಲಿವೆ ಎಂದು ಹೇಳಿದರು.

ಹರಮಾಲೆ ಪಂಚಾಮಸಾಲಿ ಪೀಠದ ದೂರದೃಷ್ಟಿಯ ಸಂಕಲ್ಪ. ಯುವ ಪೀಳಿಗೆಯ ಆತ್ಮ ಶುದ್ಧೀಕರಿಸಿ ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ವೇದಿಕೆಯಾಗಲಿದೆ. ಈಗಾಗಲೇ ಸಾವಿರಾರು ಯುವ ಮನಸುಗಳು 21, 15, 9, 3, 1 ದಿನಗಳ ಕಾಲ ಹರಮಾಲೆ ಧರಿಸಿ ವ್ರತ ಕೈಗೊಂಡಿದ್ದಾರೆ. ಹರಮಾಲೆ 1ಕೋಟಿ ಜಪದಿಂದ ಸಕಲ ಸಂಪತ್ತು ಪ್ರಾಪ್ತಿಯಾಗಲಿದೆ. ಸಂಸ್ಕಾರದ ಭಾಗವಾಗಿ ಪ್ರತಿಯೊಬ್ಬರು ಹರಮಾಲೆ ಜಪದಲ್ಲಿ ಪಾಲ್ಗೊಂಡು ಜ್ಞಾನಮಾರ್ಗದಲ್ಲಿ ನಡೆಯಬೇಕು ಎಂದರು.


ಗ್ರಾಮದರ್ಶನ ಸಂದರ್ಭದಲ್ಲಿ ಜ.14ರಂದು ನಡೆಯುವ ಕಾರ್ಯಕ್ರಮಕ್ಕೆ ಅರಸಿಕೆರೆಯ ಬಳ್ಳಾರಿ ಸಂಸದ ವೈ.ದೇವೇಂದ್ರಪ್ಪನವರಿಗೆ ವಿಭೂತಿ ಧರಿಸಿ, ಹರಮಾಲೆಯನ್ನು (ರುದ್ರಾಕ್ಷಿ) ಶ್ರೀಗಳು ಹಾಕಿದರು. ಅಂದಿನ ಒಂದು ದಿನದ ಪ್ರಸಾದ ವ್ಯವಸ್ಥೆ ಕಲ್ಪಿಸುವುದಾಗಿ ಸಂಸದರು ಶ್ರೀಗಳಿಗೆ ತಿಳಿಸಿದರು.

ಪಂಚ ದಾಸೋಹಗಳಾದ ಶಿಕ್ಷಣ, ಉದ್ಯೋಗ, ಆರೋಗ್ಯ, ಅಧ್ಯಾತ್ಮ ಹಾಗೂ ಅನ್ನ ದಾಸೋಹಗಳು ಮಹತ್ವವಾಗಿದ್ದು, ಇವುಗಳನ್ನು ಜಾರಿಗೊಳಿಸಲು ಶ್ರೀಪೀಠ ಸಂಕಲ್ಪ ಮಾಡಿದೆ ಎಂದರು.

ಹಿರೇಮೇಗಳಗೆರೆ, ಉಚ್ಚಂಗಿದುರ್ಗ, ಅರಸೀಕೆರೆ, ಮತ್ತಿಹಳ್ಳಿ, ಅಡವಿಹಳ್ಳಿ, ಗೌರಿಪುರ, ಮೈದೂರು, ಚಿಗಟೇರಿ, ಗ್ರಾಮಗಳಲ್ಲಿ ಶ್ರೀಗಳು ಗ್ರಾಮದರ್ಶನ ನಡೆಸಿದರು.

ಈ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ವಿಜಯನಗರ ಜಿಲ್ಲಾಧ್ಯಕ್ಷ ಪ್ರಕಾಶ ಪಾಟೀಲ್, ತಾಲ್ಲೂಕು ಅಧ್ಯಕ್ಷ ಪಾಟೀಲ್ ಬೆಟ್ಟನಗೌಡ, ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ನ್ಯಾಯವಾದಿ ಎಂ. ಅಜ್ಜಣ್ಣ, ಜಿ.ಕೆ.ಮಲ್ಲಿಕಾರ್ಜುನ, ಆರುಂಡಿ ನಾಗರಾಜ, ಪುರಸಭೆ ಮಾಜಿ ಅಧ್ಯಕ್ಷರಾದ ಪುಷ್ಪ ದಿವಾಕರ್, ಮುಖಂಡರಾದ ಶಶಿಧರ ಪೂಜಾರ್, ಚಂದ್ರಶೇಖರ ಪೂಜಾರ್, ಎ.ಜಿ ಮಂಜುನಾಥ್, ಚನ್ನನಗೌಡ, ಪೂಜಾರ ಮಂಜುನಾಥ್, ಬೇಲೂರು ಅಂಜಪ್ಪ, ಪಿ.ಬಿ. ಗೌಡ್ರು, ಜೆ. ಓಂಕಾರಗೌಡ, ಬಸವಂತಗೌಡ,. ವಿಜಯ ದಿವಾಕರ್, ಪಿ.ಪ್ರೇಮಕುಮಾರ್, ಆಲದಹಳ್ಳಿ ಷಣ್ಮುಖಪ್ಪ, ಶ್ರೀಮತಿ ಕೊಟ್ರೇಶ್, ರವಿ ಅಧಿಕಾರ್, ಬಸವರಾಜ ಮುಲಾಲಿ ಸೇರಿದಂತೆ ಇತರರು ಇದ್ದರು.


**ಕಮಲಾಪುರದ ಎನ್.ಪಿ. ಪಂಚಾಕ್ಷರಪ್ಪ ನಿಧನ**



ಜನನ 8.10.1951 ಮರಣ 01.01.2022

ದಾವಣಗೆರೆ ಸಿದ್ದವೀರಪ್ಪ ಬಡಾವಣೆ, 4ನೇ ಮುಖ್ಯ ರಸ್ತೆ, 'ಪಂಚರತ್ನ ನಿಲಯ' ನಂ. 1653/48 ವಾಸಿ **ನಾಗಪ್ಪನವರ ದೊಡ್ಡ ಪಕ್ಕೀರಪ್ಪ** ಇವರು ಪುತ್ರರಾದ

**ಶ್ರೀ ಎನ್.ಪಿ. ಪಂಚಾಕ್ಷರಪ್ಪ**

(ನಿವೃತ್ತ ಕ್ಯಾಷಿಯರ್, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ, ದೊಡ್ಡ ಬಾತಿ)


ಇವರು ದಿನಾಂಕ : 01.01.2022ನೇ ಶನಿವಾರ ರಾತ್ರಿ 8.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 71 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸಹೋದರರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ : 2.1.2022ರ ಭಾನುವಾರ ಬೆಳಿಗ್ಗೆ 10 ರ ವರೆಗೆ ಮೃತರ ಸ್ವಗೃಹದಲ್ಲಿ ಇರಿಸಲಾಗುವುದು. ಮೃತರ ಅಂತ್ಯಕ್ರಿಯೆಯನ್ನು ಸ್ವಗ್ರಾಮವಾದ ಹರಿಹರ ತಾಲ್ಲೂಕು ಕಮಲಾಪುರ ಗ್ರಾಮದ ರುದ್ರಭೂಮಿಯಲ್ಲಿ ಮಧ್ಯಾಹ್ನ 1 ಗಂಟೆಗೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

98445 31937, 82750 02907, 80958 22967


# ಸಾಲದ ಬಾಧೆಯಿಂದ ನೇಣಿಗೆ ಶರಣಾದ ರೈತನ ಸಾಲ ಮನ್ನಾ ಮಾಡಬೇಕು

ರಾಣೇಬೆನ್ನೂರು, ಜ.1- ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ರೈತರ ಕೃಷಿ ಸಾಲ ಮನ್ನಾ ಮಾಡಿ ರೈತರ ಆತ್ಮಹತ್ಯೆ ಪ್ರಕರಣಗಳನ್ನು ತಡೆಯಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಎಫ್. ಪಾಟೀಲ ಆಗ್ರಹಿಸಿದ್ದಾರೆ.



ರಾಣೇಬೆನ್ನೂರು : ರಾಜ್ಯ ರೈತ ಸಂಘದ ಕಾರ್ಯದರ್ಶಿ ರವೀಂದ್ರ ಪಾಟೀಲ ಆಗ್ರಹ

ಹೊಸ ವರ್ಷವನ್ನು ಸ್ವಾಗತಿಸಿಕೊಳ್ಳುವ ಈ ಸಂದರ್ಭದಲ್ಲಿ ರಾಣೇಬೆನ್ನೂರು ತಾಲ್ಲೂಕು ಚನ್ನಾಪುರ ತಾಂಡಾದ ಲೋಕಪ್ಪ ಶೇಷಪ್ಪ ಲಮಾಣಿ (52) ಎಂಬ ರೈತ ತಾನು ಮಾಡಿದ ಕೃಷಿ ಸಾಲವನ್ನು ತೀರಿಸಲಾಗದೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದು ದುರಂತ. ಇದು ರೈತರ ಪಾಲಿಕೆ ಕಹಿ ವರ್ಷ ಎಂದರು.

ಮೃತ ರೈತನ ಸಂಬಂಧಿಕರು, ತಾಂಡಾದ ಗ್ರಾಮಸ್ಥರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿಯೇ ರೈತರ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿರುವುದು ನಾಚಿಕೆಗೇಡಿನ ಸಂಗತಿ ಎಂದು ಹೇಳಿದರು.

ಮೃತನ ಸಾವಿಗೆ ಸರ್ಕಾರವೇ ಹೊಣೆಯಾಗಿದ್ದು, ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಹರಿಹರ ಗೌಡ ಪಾಟೀಲ, ಬಸವರಾಜ ಯಲ್ಲಕ್ಕನವರ, ಜಮಾಲ್‌ಸಾಬ್ ಶೇಖಸನದಿ, ಚಂದ್ರು ಡಿ. ಲಮಾಣಿ, ಹನುಮಂತಪ್ಪ. ಎಸ್. ಲಮಾಣಿ , ಹನುಮಂತಪ್ಪ. ಎನ್. ಲಮಾಣಿ, ತಿಪ್ಪೇಶ. ಎ. ನಾಯ್ಕ, ರಾಜಪ್ಪ. ಎಸ್. ಲಮಾಣಿ ಇತರರು ಉಪಸ್ಥಿತರಿದ್ದರು.

# ವಾರ ಭವಿಷ್ಯ

**ದಿನಾಂಕ : 02.01.2022 ರಿಂದ 08.01.2022**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ವ್ಯವಹಾರಗಳ ಅಭಿವೃದ್ಧಿಗೆ ಸಂಪನ್ಮೂಲವನ್ನು ಹಲವು ಮೂಲಗಳಲ್ಲಿ ಹುಡುಕಲು ಯತ್ನಿಸುವಿರಿ ಮತ್ತು ಅದರಲ್ಲಿ ಸಾಕಷ್ಟು ಯಶಸ್ವಿಯಾಗುವಿರಿ. ಸ್ನೇಹಿತರಿಗೆ ಸಲಹೆ, ಈ ಹಿಂದೆ ನಿಂತುಹೋಗಿದ್ದ ವಿದ್ಯಾಭ್ಯಾಸವನ್ನು ಮುಂದುವರೆಸುವ ಮೊದಲು ಆತ್ಮಾವಲೋಕನವನ್ನು ಮಾಡಿಕೊಳ್ಳಿ, ಇಷ್ಟು ದಿನಗಳ ಕಾಲ ನಿಮ್ಮಿಂದ ಮುಚ್ಚಿಟ್ಟಿದ್ದ ಮನೆಯ ಹಲವು ಗಂಭೀರ ಸಮಸ್ಯೆಗಳು ಈ ವಾರ ನಿಮ್ಮ ಮುಂದೆ ಅನಾವರಣಗೊಳ್ಳಲಿವೆ. ಶಾಂತಚಿತ್ತತೆಯಿಂದ ಕುಳಿತು ವಿಚಾರ ಮಾಡಿದಲ್ಲಿ ಮಾತ್ರ ಸಮಸ್ಯೆಗಳಿಗೆ ಪರಿಹಾರ, ಹಣಕಾಸಿನ ಹರಿವು ಚೆನ್ನಾಗಿಯೇ ಇರುವುದರಿಂದ ಚಿಂತೆಬೇಡ, ರಾಜಕಾರಣಿಗಳ ಜೊತೆ ಸ್ನೇಹ, ಗುರು ಜಪ ಮಾಡಿರಿ. ಭಾನು -ಸೋಮ -ಮಂಗಳ -ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಅತ್ಯುತ್ತಮ ಗಾಯಕರಿಗೆ ಹಾಗು ಕಲಾವಿದರಿಗೆ ವಿದೇಶದಲ್ಲಿ ಭಾರತೀಯ ಸಂಸ್ಕೃತಿಯ ಪ್ರಚಾರ ರಾಯಭಾರಿಯಾಗುವ ಯೋಗವಿದೆ. ಹಿರಿಯರಾಡುವ ಹಿತನುಡಿಗಳನ್ನು ಕೇಳಿ, ಮತ್ತೊಬ್ಬರ ವೈಯಕ್ತಿಕ ವಿಚಾರಗಳಲ್ಲಿ ಮಧ್ಯಪ್ರವೇಶಿಸಿ ವಿವಾದಗಳನ್ನು ಮೈಮೇಲೆ ಎಳೆದುಕೊಳ್ಳಬೇಡಿ. ಮಹಿಳಾ ರಾಜಕಾರಣಿಗಳು ವಿವಾದಾತ್ಮಕ ಹೇಳಿಕೆಯನ್ನು ಕೊಡುವುದರಿಂದ ಪಕ್ಷದ ವರಿಷ್ಠರ ಕೆಂಗಣ್ಣಿಗೆ ಗುರಿಯಾಗುವರು. ಹದಗೆಟ್ಟಿದ್ದ ಹಣಕಾಸಿನ ಪರಿಸ್ಥಿತಿ ಸರಿಯಾಗಲಿದೆ. ವ್ಯಾಪಾರವ್ಯವಹಾರಗಳಲ್ಲಿ, ವಹಿ ವಾಟು ಸಾಧಾರಣ, ಜ್ಞಾನಿಗಳೊಂದಿಗೆ ಸಮಾಗಮ, ಬುಧ -ಶುಕ್ರ -ಶನಿ- ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಆಸ್ತಿಗೆ ಸಂಬಂಧಿಸಿದ ಕಾನೂನಾತ್ಮಕ ಹೋರಾಟದಲ್ಲಿ ತಕ್ಕಮಟ್ಟಿಗೆ ಜಯ ಸಾಧಿಸುವಿರಿ. ಮನೆಯಲ್ಲಿ ಹಿರಿಯರ ಆರೋಗ್ಯದ ವಿಷಯದಲ್ಲಿ ಉದಾಸೀನ ಬೇಡ, ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಏಕಾಗ್ರತೆ ಕಡಿಮೆಯಾಗಲಿದೆ, ಆದ್ದರಿಂದ ಅದನ್ನು ಸಾಧಿಸಲು ಪ್ರಯತ್ನಿಸುವುದು ಉತ್ತಮ. ಸರ್ಕಾರಿ ಉದ್ಯೋಗ ನಿಮಿತ್ತ ಪ್ರಯಾಣ, ಹಣಕಾಸಿನ ಪರಿಸ್ಥಿತಿ ಸುಧಾರಿಸಲು ಹಲವು ಮಾರ್ಗೋಪಾಯ ಹುಡುಕಲು ಯತ್ನಿಸುವಿರಿ. ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಕೆಲಸವೊಂದು, ಪ್ರಭಾವೀ ರಾಜಕಾರಣಿಯೊಬ್ಬರ ನೆರವಿನಿಂದ ಶೀಘ್ರದಲ್ಲಿಯೇ ನೆರವೇರಲಿದೆ. ನಿರುದ್ಯೋಗಿಗಳಿಗೆ ನೌಕರಿ ಸಿಗಲಿದೆ. ಗಣಪತಿ ಆರಾಧಿಸಿ. ಸೋಮ -ಬುಧ -ಗುರು -ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಮತ್ತೊಬ್ಬರ ಬಗ್ಗೆ ಚಿಂತಿಸದಿರುವುದು ಲೇಸು, ಖಾಸಗಿ ಕಂಪನಿ ನೌಕರರು ಪದೋನ್ನತಿಗಾಗಿ ಹರ ಸಾಹಸ, ವಿದ್ಯಾಭ್ಯಾಸದಲ್ಲಿ ಹಿಂದುಳಿದಿದ್ದ ಮಕ್ಕಳು ಸಾಕಷ್ಟು ಪ್ರಗತಿ ಸಾಧಿಸಲಿದ್ದಾರೆ. ಸೋದರನೊಂದಿಗಿದ್ದ ಭಿನ್ನಾಭಿಪ್ರಾಯ ದೂರವಾಗಲಿದೆ. ಮತ್ತೊಬ್ಬರಿಗೆ ಜಾಮೀನಾದಲ್ಲಿ ತೊಂದರೆಗಳ ಸರಮಾಲೆ, ಪೂರ್ವಯೋಜಿತ ಕಾರ್ಯಕ್ರಮಗಳು ಕಾರಣಾಂತರದಿಂದ ಮುಂದೆ ಹೋಗಲಿವೆ. ಕ್ರೀಡಾಪಟುಗಳಿಗೆ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆ, ಹಣಕಾಸಿನ ಪರಿಸ್ಥಿತಿ ಉತ್ತಮವಾಗಿದ್ದು, ನಿಮ್ಮದೈನಂದಿನ ಅಗತ್ಯಗಳನ್ನು ಪೂರೈಸಲಿದೆ. ಬೆಲೆಬಾಳುವ ವಸ್ತುಗಳು ಕಳ್ಳತನವಾಗದಂತೆ ಎಚ್ಚರವಹಿಸಿ. ಭಾನು -ಸೋಮ -ಬುಧ -ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಸಮಾಜದಲ್ಲಿ ಗಣ್ಯಾತಿಗಣ್ಯರೊಂದಿಗೆ ಉತ್ತಮ ಸಂಬಂಧ, ಪ್ರಸಂಗಕ್ಕೆ ಅನುಗುಣವಾಗಿ ನಿಮ್ಮ ನಿರ್ಧಾರಗಳನ್ನು ಬದಲಾಯಿಸಿಕೊಂಡಲ್ಲಿ ಏನೂ ತಪ್ಪಿಲ್ಲ. ಅನಿರೀಕ್ಷಿತ ಘಟನೆಯಿಂದಾಗಿ ಉದ್ಯೋಗದಲ್ಲಿ ಬದಲಾವಣೆ, ವಿಚಾರಗಳನ್ನು ಸರಿಯಾಗಿ ತಿಳಿಯದೇ ಹಿರಿಯರೊಂದಿಗೆ ವಾಗ್ವಾದ ಮಾಡಲು ಹೋಗಬೇಡಿ, ವಾಹನದಲ್ಲಿ ಎಚ್ಚರದಿಂದಿರಿ, ಅನುಕೂಲಕ್ಕೆ ತಕ್ಕಷ್ಟು ಹಣಕಾಸಿನ ಹರಿವಿರುವುದರಿಂದ ಚಿಂತೆಬೇಡ. ಮಾಡಲಾಗದ ಕೆಲಸಗಳನ್ನು ಖಂಡಿತಾ ಮಾಡಲು ಹೋಗಬೇಡಿ. ಇಲ್ಲವಾದಲ್ಲಿ ತುಂಬಾ ತೊಂದರೆಗೆ ಸಿಲುಕಬೇಕಾದೀತು. ಮಾನಸಿಕ ಗೊಂದಲಗಳಿಂದ ಹೊರಬರಲು ಯತ್ನಿಸಿ. ಭಾನು, ಮಂಗಳ, ಗುರು, ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಪಟ್ಟುಬಿಡದೆ ಮಾಡಿದ ಕೆಲಸಗಳು ಸಿದ್ಧಿಸಲಿವೆ. ವಿದ್ಯುದುಪಕರಣಗಳನ್ನು ಬಳಸುವಾಗ ಸಾಕಷ್ಟು ಎಚ್ಚರದಿಂದಿರಿ. ಪದವೀಧರರಾದ ಯುವಕರಿಗೆ ಕೃಷಿ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ಮೂಡಲಿದೆ. ಸಜ್ಜನರ ಬಗ್ಗೆ ಹೀಯಾಳಿಕೆ ಮಾತುಗಳು ಬೇಡ, ಕೀಟನಾಶಕ ವಸ್ತುಗಳನ್ನು ಚಿಕ್ಕಮಕ್ಕಳ ಕೈಗೆ ಸಿಗದಂತೆ ನೋಡಿಕೊಳ್ಳಿ. ಸಮಾಜ ಸೇವೆಯಲ್ಲಿ ತೊಡಗಿಕೊಂಡವರಿಗೆ ಮಾನಾಪಮಾನಗಳು ಸಹಜ, ಎದೆಗುಂದದೆ ಮುನ್ನಡೆಯುವುದು ಉತ್ತಮ. ನೃತ್ಯ ಕಲಾವಿದರಿಗೆ ಉತ್ತಮ ವೇದಿಕೆ ದೊರೆಯುವುದಲ್ಲದೆ, ಪ್ರಯಾಣ ನಿಮಗೆ ಸಂಕಟವನ್ನುಂಟುಮಾಡಲಿದೆ. ಮಂಗಳ -ಗುರು -ಶುಕ್ರ -ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ವಿದ್ಯಾರ್ಥಿಗಳು ಅಧ್ಯಯನದಲ್ಲಿ ಉತ್ತಮ ಸಾಧನೆ ಮಾಡಲು ಹೆಚ್ಚಿನ ಅವಕಾಶ ದೊರೆಯಲಿದೆ. ನಿರುದ್ಯೋಗಿಗಳು ನೌಕರಿಯನ್ನರಸಿ ಹೆಚ್ಚಿನ ತಿರುಗಾಟ, ರಾಜಕಾರಣವನ್ನು ಸೇರಬೇಕೆಂಬ ತುಡಿತ ಸಹಜವಾಗಿದ್ದರೂ ಕೂಡ, ನಿಮ್ಮ ಇತಿಮಿತಿಗಳ ಅರಿವಿರುವುದು ಉತ್ತಮ. ಸರ್ಕಾರಿ ಮೇಲಾಧಿಕಾರಿಗಳು ಕಾಣದ ಕೈಗಳ ಪ್ರಲೋಭನೆಗಳಿಗೆ ಒಳಗಾಗಿ, ನೌಕರಿಗೆ ಸಂಚಕಾರ ತಂದುಕೊಳ್ಳುವ ಪ್ರಸಂಗ ಬರಬಹುದು. ಆತ್ಮಗೌರವದೊಂದಿಗೆ ನಡೆದುಕೊಳ್ಳುವವರಿಗೆ ಯಾರಿಂದಲೇ ಆಗಲಿ, ಯಾವುದಕ್ಕೇ ಆಗಲೀ ಹೆದರಬೇಕಾಗಿಲ್ಲ. ಮನೆಕಟ್ಟುವ ವಿಚಾರವಿದ್ದಲ್ಲಿ, ಈಗ ಅದಕ್ಕೆ ಸಕಾಲ. ಅದಕ್ಕೆ ಬೇಕಾದ ಆರ್ಥಿಕ ನೆರವು ತಾನಾಗಿಯೇ ಒದಗಿಬರಲಿದೆ. ಬುಧ -ಶುಕ್ರ -ಶನಿ -ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ನಿವೃತ್ತಿಯಂಚಿನಲ್ಲಿರುವವರಿಗೆ ನಯವಂಚಕರಿಂದ ಭಾರೀ ಮೋಸ, ಬಗೆಹರಿಯದ ಆರೋಗ್ಯ ಸಮಸ್ಯೆ ನಿಮ್ಮನ್ನು ಹೈರಾಣಾಗಿಸಲಿದೆ. ತುಸು ತಾಳ್ಮೆಯಿಂದ ಬಗೆಹರಿಯ ಬೇಕಾಗಿರುವ ವ್ಯಾಜ್ಯಗಳು ಕೋರ್ಟ್-ಕಛೇರಿಯೆಂದು ಅಲೆದಾಡ ಬೇಕಾದೀತು. ಈಗಲೂ ಕಾಲಮಿಂಚಿಲ್ಲ, ರಾಜೀ-ಪಂಚಾಯ್ತಿ ಮುಖಾಂತರ ಬಗೆಹರಿಸಿ ಕೊಳ್ಳಲು ಪ್ರಯತ್ನಿಸಿ. ಚಿಕ್ಕಮಕ್ಕಳ ಜಗಳಗಳಲ್ಲಿ ದೊಡ್ಡವರು ಪ್ರವೇಶ ಮಾಡದಿರುವುದು ಲೇಸು. ಸಂದೇಹಾಸ್ಪದ ವ್ಯಕ್ತಿಗಳಿಂದ ಅಂತರ ಕಾಪಾಡಿಕೊಳ್ಳುವುದು ಉತ್ತಮ. ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿಯನ್ನು ಕಾಣುವ ನಿಮಗೆ ಸಾಮಾಜಿಕ ಜೀವನದಲ್ಲಿ ಕಳಂಕ ತಪ್ಪಿದ್ದಲ್ಲ. ಯುವಕರು ಅನಾವಶ್ಯಕವಾಗಿ ಹಣವನ್ನು ಪೋಲು ಮಾಡುವರು. ಅವಿವಾಹಿತರಿಗೆ ಕಂಕಣಭಾಗ್ಯ. ಸೋಮ -ಮಂಗಳ- ಬುಧ -ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಹೊಸ ವಾಹನದ ಖರೀದಿ ವಿಚಾರ ಸದ್ಯಕ್ಕೆ ಬೇಡ, ಬಂಧುಗಳೊಬ್ಬರ ಅನಾರೋಗ್ಯ ಸಮಸ್ಯೆ ನಿಮ್ಮನ್ನು ಕಾಡಲಿದೆ. ನಿರುದ್ಯೋಗಿ ಮಗನಿಗೆ ನೌಕರಿ ಕೊಡಿಸು ವಿಚಾರದಲ್ಲಿ ಹರಸಾಹಸ, ಅನಾರೋಗ್ಯದಿಂದ ಬಳಲುತ್ತಿದ್ದ ಹಿರಿಯರಿಗೆ, ಈ ವಾರದಿಂದ ಸಾಕಷ್ಟು ಸುಧಾರಣೆ, ಸಮಾಜ ಸೇವೆಯಲ್ಲಿ ತೊಡಗಿಕೊಂಡವರಿಗೆ ಸರ್ಕಾರದಿಂದ ಸನ್ಮಾನವಾಗಲಿದೆ. ವಾರದ ಮಧ್ಯದಲ್ಲಿ ಆರ್ಥಿಕ ಪರಿಸ್ಥಿತಿ ಕುಸಿತ ಕಾಣುವುದರಿಂದ ಖರ್ಚುವೆಚ್ಚಗಳ ಮೇಲೆ ಹಿಡಿತಸಾಧಿಸುವುದು ಒಳಿತು. ದಿನಸಿ ವ್ಯಾಪಾರಿಗಳಿಗೆ ಹೆಚ್ಚಿನ ವಹಿವಾಟು ಉತ್ತಮ ಲಾಭ, ಜೊತೆಗೆ ಆದಾಯದಲ್ಲಿ ವೃದ್ಧಿಕಾಣಲಿದೆ. ದುರ್ಗಾರಾಧನೆಯಿಂದ ಹೆಚ್ಚಿನ ಪುಣ್ಯಲಭಿಸಲಿದೆ. ಭಾನು -ಸೋಮ -ಗುರು -ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ರಾಜಕಾರಣಿಗಳ ಭರವಸೆ ನಂಬಿಕೊಂಡು ಯಾವುದೇ ಕೆಲಸ ಕಾರ್ಯಗಳನ್ನು ಕಾರ್ಯರೂಪಕ್ಕೆ ತರುವ ಹುಚ್ಚು ಸಾಹಸಕ್ಕೆ ಕೈಹಾಕಬೇಡಿ, ಲಘು ಊಟ -ಉಪಹಾರಗಳ ತಯಾರಕರಿಗೆ ಬೇಡಿಕೆ ಹೆಚ್ಚಲಿದ್ದು, ಆದಾಯ ದುಪ್ಪಟ್ಟಾಗಲಿದೆ. ಪ್ರತಿಯೊಂದು ಕೆಲಸಗಳಿಗೂ ಪರರನ್ನು ಅವಲಂಬಿಸುವುದನ್ನು ಬಿಡದೇ ಹೋದಲ್ಲಿ ಭಾರೀ ನಷ್ಟ, ಸಂಶೋಧನಾ ವಿದ್ಯಾರ್ಥಿಗಳ ವಿಚಾರಾತ್ಮಕವಾದ ಚಿಂತನ-ಮಂಥನಗಳಿಂದ ಕೂಡಿದ ಪ್ರಬಂಧಗಳಿಗೆ ಹೆಚ್ಚಿನ ಬೇಡಿಕೆ ಬರಲಿದೆ, ಸರ್ಕಾರದಿಂದ ಸಾಕಷ್ಟು ಆರ್ಥಿಕ ನೆರವು, ಅವಿವೇಕಿಗಳೊಂದಿಗೆ ವಾದ-ವಿವಾದ ಬೇಡ, ಉಳಿತಾಯದ ಬಗ್ಗೆ ಯೋಚಿಸಬಹುದು. ಸಾಕುಪ್ರಾಣಿಗಳಿಂದ ಅಪಾಯ, ಎಚ್ಚರದಿಂದಿರಿ. ಬುಧ -ಗುರು- ಶನಿ -ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಹಣಕಾಸಿನ ಮೂಲದಲ್ಲಿ ಹೆಚ್ಚಳ, ಖರ್ಚು-ವೆಚ್ಚಗಳು ಮಿತಿಮೀರಿದಲ್ಲಿ ಮುಂದೆ ಉಳಿತಾಯದ ಗಂಟೂ ಕೂಡ ಕರಗಬಹುದು. ಹಿರಿಯರಿಗೆ ಸಂಘ-ಸಂಸ್ಥೆಗಳಲ್ಲಿ ಉನ್ನತ ಹುದ್ದೆ ದೊರೆಯಲಿದ್ದು, ಸ್ಥಿರ ಆಸ್ತಿಗಳನ್ನು ಕೊಳ್ಳುವ ವೇಳೆ ತಪ್ಪು ದಾಖಲೆಗಳಿಂದಾಗಿ ಮುಂಗಡ ಹಣವನ್ನು ಕಳೆದುಕೊಳ್ಳುವ ಸಂಭವವಿದೆ. ಯುವಕರಿಗೆ ಆತ್ಮವಿಶ್ವಾಸ ಉತ್ತಮ. ಶೃಂಗಾರ ಸಾಧನಗಳ ಮಾರಾಟಗಾರರಿಗೆ ವ್ಯವಹಾರ ಹೆಚ್ಚಲಿದೆ. ಕೆಲವೊಂದು ಸಮಸ್ಯೆಗಳಿಗೆ ನಿಮ್ಮಲ್ಲೇ ಪರಿಹಾರ, ತುಸು ತಾಳ್ಮೆಯಿಂದ ವರ್ತಿಸುವುದನ್ನು ಕಲಿಯಿರಿ. ಅತಿಯಾದ ಮೋಜು, ಮಸ್ತಿಗಳಿಂದಾಗಿ ಆರೋಗ್ಯದಲ್ಲಿ ಏರುಪೇರು, ಕರಿದ ಪದಾರ್ಥಗಳನ್ನು ವರ್ಜಿಸುವುದು ಎಲ್ಲಾ ರೀತಿಯಿಂದ ಉತ್ತಮ. ಗುರು -ಶುಕ್ರ -ಶನಿ -ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಸ್ನೇಹಿತರೊಂದಿಗಿದ್ದ ಹಣಕಾಸಿನ ವ್ಯವಹಾರವನ್ನು ರಾಜೀ ಪಂಚಾಯ್ತಿಯೊಂದಿಗೆ ಬಗೆಹರಿಸಿಕೊಳ್ಳಲು ಪ್ರಯತ್ನಿಸಿ ಏಕಕಾಲದಲ್ಲಿಯೇ ಹತ್ತು ಹಲವು ಕೆಲಸಗಳನ್ನು ಮಾಡುತ್ತೇನೆಂಬ ಹುಂಬತನಕ್ಕೆ ಬೀಳಬೇಡಿ. ಇದರಿಂದ ಎಲ್ಲಾ ಕೆಲಸಗಳು ಅರ್ಧದಲ್ಲೇ ನಿಂತು ಅಪಹಾಸ್ಯಕ್ಕೆ ಈಡಾಗುವಿರಿ. ಈ ಸಂದರ್ಭದಲ್ಲಿ ಉತ್ತಮ ಗುರುಗಳ ಸಲಹೆ ಮತ್ತು ಮಾರ್ಗದರ್ಶನ ಪಡೆಯುವುದು ಮೇಲು. ಕಟ್ಟಡ ನಿರ್ಮಾಣ ಸಾಮಗ್ರಿಗಳ ಮಾರಾಟಗಾರರಿಗೆ ಮತ್ತು ಕಟ್ಟಡ ಕಟ್ಟುವ ಕಾರ್ಮಿಕರಿಗೆ ಉತ್ತಮ ಸಂಪಾದನೆ, ಸಂಗಾತಿಯ ಕೋರಿಕೆಯನ್ನು ಪೂರೈಸಲು ಹೆಚ್ಚು ಹಣ ಖರ್ಚಾಗಬಹುದು. ಭಾನು -ಸೋಮ -ಗುರು -ಶುಭ ದಿನಗಳು.

## ಗಿಡಮೂಲಿಕೆ ಹೊಂಗೆ



ಬಹಳ ಹಿಂದಿನ ಕಾಲದಿಂದಲೂ ಭಾರತೀಯರಿಗೆ ಚಿರಪರಿಚಿತವಿರುವ ಈ ಹೊಂಗೆ ಮರವನ್ನು ರಸ್ತೆಯ ಇಕ್ಕೆಲಗಳಲ್ಲಿ ಬೆಳೆಸಲಾಗುತ್ತಿದೆ. ರೈತರು ಗದ್ದೆ ಮತ್ತು ಹೊಲಗಳ ಬದಿಯಲ್ಲಿ ಬೆಳೆಸುತ್ತಾರೆ.

ಹೊಂಗೆಯ ನೆರಳು ದಣಿವನ್ನು ಪರಿಹರಿಸುವುದಷ್ಟೇ ಅಲ್ಲದೇ ಮನಸ್ಸಿನ ದುಗುಡವನ್ನು ಕಳೆದು ಮನಶ್ಶಾಂತಿಯನ್ನು ನೀಡುವುದರಿಂದ 'ಹೊಂಗೆಯ ನೆರಳು, ತಾಯಿಯ ಮಡಿಲು' ಎಂಬ ನಾಣ್ಣುಡಿ ಪ್ರಚಲಿತದಲ್ಲಿದೆ. ಹೊಂಗೆಯಲ್ಲಿ ಆಂಟಿ ಮೈಕ್ರೋಬಿಯಲ್, ಆಂಟಿ ಸೆಪ್ಟಿಕ್, ಆಂಟಿ ಇನ್ಫ್ಲಾಮೇಟರಿ ಲಕ್ಷಣಗಳು ಕಂಡು ಬರುತ್ತವೆ. ಇದರಿಂದ ಸೋಂಕುಗಳ ನಿವಾರಣೆ ಆಗುವುದರ ಜೊತೆಗೆ ಗಾಯಗಳು, ಬಾವು, ಉರಿಯೂತ ಮತ್ತು ನೋವು ಕಡಿಮೆಯಾಗುತ್ತದೆ. ಹೊಂಗೆಯ ಎಲ್ಲಾ ಭಾಗಗಳು ಔಷಧಿ ಯುಕ್ತವಾಗಿವೆ.

ಹೊಂಗೆ ಎಲೆ ಮತ್ತು ಬೀಜಗಳನ್ನು ರಕ್ತಾರ್ಶ್ಯ, ಮಲೇರಿಯಾ ಜ್ವರ, ಅರ್ಧ ತಲೆನೋವು, ಪೈಲ್ಸ್, ಕುರು, ಹುಣ್ಣು, ತುರಿಕೆ, ಗಜಕರ್ಣ, ಇಸುಬು, ವಾಸಿ ಮಾಡಲು, ತಲೆಹೊಟ್ಟು, ಕೂದಲಿನ ನಾಶ ತಡೆಯಲು ಬಳಸುತ್ತಾರೆ.

ಹೊಂಗೆ ಎಲೆಗಳ ಕಷಾಯ ಸೇವನೆಯಿಂದ ಮಧುಮೇಹವನ್ನು ಹತೋಟಿಯಲ್ಲಿಡಬಹುದು. ಎಲೆಗಳನ್ನು ಕಫ ಮತ್ತು ವಾಂತಿ ಶಮನಕ್ಕೆ ಬಳಸುತ್ತಾರೆ.

ತಲೆಯಲ್ಲಿ ಹೇನುಗಳಾಗಿದ್ದರೆ ಎಲೆಗಳನ್ನು ರುಬ್ಬಿ ಹಚ್ಚಬೇಕು. ಚೇಳು, ಜೇನು ಹುಳು ಕಡಿದಿರುವ ಜಾಗದಲ್ಲಿ ತಕ್ಷಣ ಹೊಂಗೆ ಎಣ್ಣೆಯನ್ನು ಹಚ್ಚಬೇಕು. ಕೈಕಾಲು ಮತ್ತು ಕೀಲು ನೋವಿಗೆ ಕರ್ಪೂರ ಹಾಕಿ ಕಾಯಿಸಿದ ಹೊಂಗೆ ಎಣ್ಣೆಯನ್ನು ಬಳಸಬೇಕು. ಈ ಎಣ್ಣೆ ಬಳಸಿ ಅನೇಕ ಚರ್ಮ ರೋಗಗಳಿಗೆ, ಸರ್ಪಸುತ್ತು, ಕಜ್ಜಿ, ತುರಿಕೆಗಳಿಗೆ, ಕುಷ್ಠ ರೋಗಕ್ಕೆ ಔಷಧಿ ಮಾಡಲಾಗುತ್ತದೆ. ಹೊಂಗೆ ಎಣ್ಣೆ ಸೇವನೆಯಿಂದ ಜಂತು ಹುಳುಗಳು ನಾಶವಾಗುವವು. ಸೋಪು ತಯಾರಿಕೆಯಲ್ಲಿ ಹೊಂಗೆ ಎಣ್ಣೆಯನ್ನು ಬಳಸುತ್ತಾರೆ. ದೀಪಕ್ಕೆ ಈ ಎಣ್ಣೆ ಬಳಸುವುದರಿಂದ ಸೊಳ್ಳೆಗಳನ್ನು ಓಡಿಸಬಹುದು. ಹೊಂಗೆ ಕಡ್ಡಿಯಿಂದ ಹಲ್ಲುಗಳನ್ನು ತಿಕ್ಕುತ್ತಿದ್ದರೆ ಕ್ರಿಮಿಗಳು ನಾಶವಾಗುವವು. ಒಸಡುಗಳು ಗಟ್ಟಿಯಾಗುವು ಮತ್ತು ಬಾಯಿಯ ದುರ್ಗಂಧ ಪರಿಹಾರವಾಗುವುದು.


ಅಜೀರ್ಣತೆ, ಕಣ್ಣು ಉರಿಗೆ, ಹಸಿವಾಗ ದಿರುವಿಕೆಗೆ, ಗ್ಯಾಸ್ಟ್ರಿಕ್ ಸಮಸ್ಯೆಗೆ, ಆಸ್ಟಿಯೋ ಆರ್ಥರೈಟಿಸ್, ಸೈನಸ್ ಅಲ್ಸರ್, ಶೀತ, ಕೆಮ್ಮು, ನಾಯಿ ಕೆಮ್ಮು ಮತ್ತು ಕಫ ನಿವಾರಣೆ, ಮೆದುಳಿನ ವಿಚಾರಗಳಿಗೆ ಕಾರಂಜ ಚೂರ್ಣವು ಪರಿಹಾರವಾಗಿದೆ.

ಹೀಗೆ ಬಹುಪಯೋಗಿ ಮರವನ್ನು ಮನೆಯ ಮುಂದೆ ಬೆಳೆಸಬೇಕು. ನೆರಳಿಗೂ, ಔಷಧಕ್ಕೂ ಬರುತ್ತದೆ.

**- ಮಮತಾ ನಾಗರಾಜ್**
ಪಾರಂಪರಿಕ ವೈದ್ಯೆ, ದಾವಣಗೆರೆ.

## ಪದವಾಣಿ-06

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**

| | |
|---|---|
| 1) ಗಣಪತಿಗೆ ಪ್ರಿಯವಾದ ಭಕ್ಷ್ಯ | 3 |
| 3) ವಾಂಗೀಬಾತಿಗೆ ಬಳಸುವ ತರಕಾರಿ | 3 |
| 5) ಬುದ್ಧಿವಾದದ ಮಾತುಗಳು | 5 |
| 6) ಹುಟ್ಟಿನಿಂದ ಬಂದುದು | 4 |
| 8) ಹದಿನೈದರ ನಂತರದ ಸಂಖ್ಯೆ | 4 |
| 9) ಮನುಷ್ಯನನ್ನೇ ಆಹುತಿ ಕೊಡುವುದು | 4 |
| 10) ನರಕಾಧಿಪತಿಯ ಸೇವಕ | 4 |
| 12) ಕೆಟ್ಟ ದಿವಸವಿದು | 5 |
| 14) ಒಂದು ಬಗೆಯ ಗುಂಪಿನಾಟ | 3 |
| 15) ಹೇಗೆ ನೋಡಿದರೂ ಇದು ದುರಸ್ತಿ | 3 |

**ಮೇಲಿನಿಂದ ಕೆಳಕ್ಕೆ :**

| | |
|---|---|
| 1) ವಂಚಕ ಹೀಗೆ ಬಂದಿದ್ದಾನೆ | 4 |
| 2) ಸಿಹಿ-ವಿರುದ್ಧ ಪದ | 2 |
| 3) ವನ-ತದ್ಭವ ರೂಪ | 2 |
| 4) ಈಡೇರು | 4 |
| 7) ನೂಲು ತೆಗೆಯುವ ಸಾಧನ | 3 |
| 8) ಹಯಕ್ಕೂ ಬಂದ ಯೌವ್ವನ | 3 |
| 9) ಪುರುಷತ್ವವಿಲ್ಲದವನು | 4 |
| 11) ಅವಸರ ಹೀಗಾಗಿದೆ | 4 |
| 12) ಸಣ್ಣ ಸಿಗುರು | 2 |
| 13) ಮೋಸಕ್ಕೆ ಹೆಸರಾದ ಪ್ರಾಣಿ | 2 |

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 05ರ ಉತ್ತರಗಳು :**

**ಎಡದಿಂದ ಬಲಕ್ಕೆ : 1) ಸೌಗಂಧಿಕಾ 3) ಕವಯತ್ರಿ 5) ವದನ 6) ಪಾಲು 7) ಕರ 11) ಕಸ 13) ವಿಷ 14) ಮದನ 15) ರಿಕ್ತಕರ 16) ತಳವಾರ.**

**ಮೇಲಿನಿಂದ ಕೆಳಕ್ಕೆ : 1) ಸೌಪರ್ಣಿಕಾ 2) ಕಾವಲು 3) ಕನಕ 4) ತ್ರಿಭುವನ 6) ಪಾರದರ್ಶಕ 8) ರಸನಿಮಿಷ 9) ವಿಂಧ್ಯಗಿರಿ 10) ಬೆಂಕಿಪುರ 12) ಸಮರ 13) ವಿನತ.**

## ಹರಿಹರದ ತಾಲ್ಲೂಕು ಕಚೇರಿಯಲ್ಲಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆ



ಹರಿಹರ, ಜ.1- ನಗರದ ತಾಲ್ಲೂಕು ಕಛೇರಿ ಸಭಾಂಗಣದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆ ಕಾರ್ಯಕ್ರಮವನ್ನು ತಹಸೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ವಿಶ್ವಕರ್ಮ ಸಮಾಜದ ಮುಖಂಡರಾದ ರುದ್ರಚಾರಿ, ಲಕ್ಷ್ಮಿ ರಾಜಾಚಾರ್, ನೇತ್ರಾವತಿ ಪ್ಯಾಟಿ, ಭಾಗೀರತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಹೊಳೆಹರಳಹಳ್ಳಿಯ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ



ಹೊನ್ನಾಳಿ ತಾಲ್ಲೂಕಿನ ಹೊಳೆಹರಳಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿಗೆ ಶನಿವಾರ ವಿಶೇಷ ಪೂಜೆ ನೆರವೇರಿಸ ಲಾಯಿತು.

# ಸುಕವೇಯಿಂದ ರಾಜ್ಯೋತ್ಸವ, ನಟ ಪುನೀತ್ ಸ್ಮರಣೆ



ದಾವಣಗೆರೆ, ಜ.1- ಸುವರ್ಣ ಕರ್ನಾಟಕ ವೇದಿಕೆಯಿಂದ 66ನೇ ಕನ್ನಡ ರಾಜ್ಯೋತ್ಸವ ಹಾಗೂ ಪುನೀತ್ ರಾಜಕುಮಾರ್ ಸ್ಮರಣೆ ಕಾರ್ಯಕ್ರಮವನ್ನು ಸೋಮವಾರ ತಾಲ್ಲೂಕಿನ ಹೊನ್ನಮರಡಿ ಆಂಜನೇಯ ನಗರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಧ್ವಜಾರೋಹಣ ನೆರವೇರಿಸಿದ ಕಸಾಪ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತನ್ನು ಜನರ ಬಳಿಗೆ ಕೊಂಡೊಯ್ಯಲು ಯೋಜನೆ ಹಾಕಿಕೊಂಡಿದ್ದೇನೆ. ಇದಕ್ಕೆ ಎಲ್ಲರ ಸಹಕಾರ ಅಗತ್ಯ ಎಂದರು.

ಮುಂಬರುವ ನವೆಂಬರ್ ತಿಂಗಳ ಒಳಗಾಗಿ ಜಿಲ್ಲೆಯ ಪ್ರತಿ ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಧ್ವಜಸ್ತಂಭ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು. ಈಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ 500 ರೂ. ಸದಸ್ಯತ್ವ ಶುಲ್ಕವನ್ನು 250 ರೂ.ಗಳಿಗೆ ಇಳಿಸಲು ಕೇಂದ್ರ ಸಮಿತಿಗೆ ಶಿಫಾರಸ್ಸು ಮಾಡಲಾಗುವುದು ಎಂದು ಅವರು ತಿಳಿಸಿದರು.

**ಹೊನ್ನಮರಡಿ**

ಇದೇ ವೇಳೆ ಕಸಾಪ ನೂತನ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಹಾಗೂ ಜಿಲ್ಲಾ ಕನ್ನಡ ರಾಜ್ಯೋತ್ಸವ ಸನ್ಮಾನ ಪುರಸ್ಕೃತ ಅಂತರರಾಷ್ಟ್ರೀಯ ಯೋಗಪಟು ಹೆಚ್.ಪರಶುರಾಮ್ ಅವರನ್ನು ಅಭಿನಂದಿಸಲಾಯಿತು.

ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಆರ್. ಸಂತೋಷಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಸಾಪದ ಬಿ.ದಿಳ್ಳೆಪ್ಪ, ಗ್ರಾ. ಪಂ. ಅಧ್ಯಕ್ಷೆ ಮಂಜುಳಾ ಯೋಗೇಶಪ್ಪ, ಸದಸ್ಯರಾದ ಸುನೀಲ್ ಕುಮಾರ್ ಕುಕ್ಕುವಾಡ, ಮಂಜುನಾಥ ಮತ್ತಿ, ಗ್ರಾಪಂ ಮಾಜಿ ಅಧ್ಯಕ್ಷ ಮನೋಹರ, ವಾಲ್ಮೀಕಿ ವಿದ್ಯಾಪೀಠದ ಅಧ್ಯಕ್ಷ ಚಂದ್ರಪ್ಪ, ಮುಖ್ಯೋಪಾಧ್ಯಾಯ ಶ್ರೀನಿವಾಸ, ವೇದಿಕೆಯ ಗ್ರಾಮ ಘಟಕದ ಅಧ್ಯಕ್ಷ ಬಸವರಾಜ, ಅಂಜಿನಪ್ಪ, ಗಂಗಣ್ಣ, ಸಿದ್ದೇಶ, ರುದ್ರಸ್ವಾಮಿ, ಪುಟ್ಟರಾಜು ಇನ್ನಿತರರು ಉಪಸ್ಥಿತರಿದ್ದರು.

## ಕರಾಳ ಹೊಸ ವರ್ಷದ ಆರಂಭ

ಕಾಲಗರ್ಭದ ಕಾಲಮಾನದ
ಕಾಲದ ಕಾಲವೆ ಕರಾಳ ಹೊಸ
ಪ್ರಕೃತಿ ಪ್ರಕ್ರಿಯೆ ಪ್ರಖರತೆಯ
ತೀವ್ರ ಶೀತ ಹಿಮ ಹಿಂಸೆಯ
ಹಳೆ ಡೆಲ್ಟಾ-2 ಓಮಿಕ್ರಾನ್
ಕೊರೊನಾ ವೈರಸ್ ವೈರಲ್ ವೈದಾಟ !!

ಇಡೀ ವಿಶ್ವಮನುಕುಲಕ್ಕೆ ಬರಸಿಡಿಲ
ಮಳೆಮೋಡ ಸ್ಫೋಟ ಆಕಾಶವೇ
ಧರೆಗಿಳಿದ ಪ್ರಳಯ ಭಯ ಆವರಿಸಿ
ವಿಶ್ವಜನರ ನಿದ್ದೆಗೆಡಿಸಿ ಹೀಗೂ
ಸಂಶಯ ಭೂ ಮಂಡಲವನ್ನೇ
ಘಟಸರ್ಪ ನುಂಗಿದ ಹಾಗೆ
ಆಕ್ರಮಿಸಿದ ನೀರು ಹಗಲವೋ
ರಾತ್ರಿಯೋ... ಪ್ರಶ್ನೆ??

ಸತತ ಕೆಲವು ವರ್ಷಗಳು ದಿಕ್ಕೆಟ್ಟ
ದಿಗ್ಭ್ರಾಂತಿಯ ವಿಶ್ವಜನರ ನೆಲೆಯ
ವಸತಿ ವಿಶ್ವಾಸಕ್ಕೆ ಜನರಿಗೆ ಬದುಕುವ
ಹೋರಾಟ ಪ್ರತಿ ಸಮಯ ಜನರ
ಶ್ವಾಸ ಉಸಿರಾಟ ಹುಸಿಯಾದರೆ
ಕುಟುಂಬಗಳಿಗೆ ಕರಾಳ ಕಣ್ಣೀರು !!

ನಮ್ಮನ್ನು ಸದಾ ಬೆನ್ನತ್ತಿ ಬರುವದೆ
ನಮ್ಮ ನೆರಳು ಅದರಂತೆ ನಮ್ಮವರ
ಯಜಮಾನರೆಲ್ಲಾ ಕುಟುಂಬ
ಸದಸ್ಯರನ್ನು
ಸಾಕುವ ಜವಾಬ್ದಾರಿ ಆಕಸ್ಮಿತ
ತಂದೆ ತಾಯಿ ಇಲ್ಲವಾದರೆ ಇರುವ
ಮಕ್ಕಳ ಪೋಷಣೆ ಆಶ್ರಯ ಸರ್ಕಾರ

2021-ರ ಚಿತ್ರ ವಿಚಿತ್ರ ಚಿತ್ರಾನ್ನದ
ಕಾಲ
ಯಕ್ಷಪ್ರಶ್ನೆಯ ಕಾಲ ಒದಗಿರುವಾಗ
ವಿಶ್ವ ಪ್ರತಿ ಕುಟುಂಬಕ್ಕೆ ಭೂ ಕಂಪನ
ವಾದರೆ ಜನರ ಹೃದಯಬಡಿತಕ್ಕೆ
ಮನಕಂಪನವಾದರೆ ವಿಶ್ವವೇ
ಮೌನಯಾತ್ರೆಯ
ಯಾಣ ಶಿಲೆಗಳ ಆಕಾಶದೆತ್ತರ
ವೀಕ್ಷಣೆಯ
ಹೊಸ ಶಿವದರ್ಶನ ವಿಶ್ವಕ್ಕೆಲ್ಲಾ ಬೆಳಗಲಿ
ಸುಖ ಸಿಗಲಿ ಜನರಿಗೆಲ್ಲ ಹೊಸ
ಹರ್ಷದ ವರ್ಷವು !!

**- ಟಿ.ಜಿ.ಸಂಗಮ್**
ಗಣಿತ ಶಿಕ್ಷಕರು, ಕೊಟ್ಟೂರು

## ಹರಿಹರ ಗ್ರಾಮದೇವತೆ ಉತ್ಸವ ಸಮಿತಿ ಪದಾಧಿಕಾರಿಗಳಿಗೆ ಸನ್ಮಾನ





ಹರಿಹರ, ಜ.1- ನಗರದ ಹೊಸಭರಂಪುರ ಬಡಾವಣೆಯ ಗ್ರಾಮದೇವತೆ ಊರಮ್ಮದೇವಿಯ ಕಾರ್ತೀಕ ಮಹೋತ್ಸವದ ಸಂದರ್ಭದಲ್ಲಿ ನೂತನವಾಗಿ ಗ್ರಾಮದೇವತೆ ಉತ್ಸವ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದ ಕೆ.ಅಣ್ಣಪ್ಪ, ಕಾರ್ಯದರ್ಶಿ ಬೆಣ್ಣೆ ರೇವಣಸಿದ್ದಪ್ಪ, ಸಹ ಕಾರ್ಯದರ್ಶಿ ಪಾಲಾಕ್ಷಪ್ಪ ಅವರನ್ನು ದೇವಸ್ಥಾನ ಸಮಿತಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಹೊಸಭರಂಪುರ ಗ್ರಾಮದೇವತೆ ದೇವಸ್ಥಾನ ಸಮಿತಿಯ ಅಧ್ಯಕ್ಷ ಪೂಜಾರ್ ವೀರಣ್ಣ, ಪ್ರಧಾನ ಕಾರ್ಯದರ್ಶಿ ಕೆ.ಬಿ. ರಾಜಶೇಖರ್, ಗೌರವ ಅಧ್ಯಕ್ಷ ಮಜ್ಜಿಗೆ ಪಾಲಕ್ಷಪ್ಪ, ಸದಸ್ಯರಾದ ಸುರೇಶ್ ಚಂದಾಪೂರ್, ಗುತ್ಯಪ್ಪ, ಚಿದಾನಂದ ಕಂಚಿಕೇರಿ, ಪರಮೇಶ್ವರಪ್ಪ ನಿಲಗುಂದ, ಹಾವನೂರು ಈರಣ್ಣ, ಚಂದ್ರಪ್ಪ ಮಜ್ಜಿಗೆ, ರಾಘು ಚೌಗಳೆ, ವಕೀಲರು ಪರಶುರಾಮ್ ಅಂಬೇಕರ್, ದಾವಣಗೆರೆ ಶಿವಾನಂದ, ಅರ್ಚಕ ನಾಗರಾಜ್, ಬೆಣ್ಣೆ ಸಿದ್ದೇಶ್, ಗೀರಿಶ್ ಕರಿಬಸಪ್ಪ ಕಂಚಿಕೇರಿ, ವೇದಮೂರ್ತಿ, ಸಂಜು, ವೀರಭದ್ರ ಹಾವನೂರು, ಸಚಿನ್, ರಾಖೇಶ್, ನಾಗರಾಜ್, ಶಂಭು, ಬಸವರಾಜ್ ನಿಲಗುಂದ, ಕೆ.ಬಿ. ಚಂದ್ರಪ್ಪ, ಎಂ. ಸಾಗರ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು 'ವಿನೂತನ' ವಾರ್ಷಿಕೋತ್ಸವ

ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿರುವ ವಿನೂತನ ಮಹಿಳಾ ಸಮಾಜದ 15ನೇ ವಾರ್ಷಿಕೋತ್ಸವ ಸಮಾರಂಭವು ಇಂದು ಸಂಜೆ 4.30 ಕ್ಕೆ ವಿದ್ಯಾನಗರದ ವಿನಾಯಕ ದೇವಸ್ಥಾನದ ಆವರಣದಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಡಾ. ದಾದಾಪೀರ್ ನವಿಲೇಹಾಳ್ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ರೇಖಾ ಓಂಕಾರಪ್ಪ ವಹಿಸುವರು. ಅತಿಥಿಯಾಗಿ ಬಿ. ವಾಮದೇವಪ್ಪ, ಶ್ರೀಮತಿ ವೀಣಾ ನಂಜಪ್ಪ, ಯು. ಸದಾಶಿವಪ್ಪ ಆಗಮಿಸುವರು.

## ಲಿಂ. ರಂಭಾಪುರಿ ಜಗದ್ಗುರುಗಳ ಪುಣ್ಯ ಸ್ಮರಣೆಯಲ್ಲಿ ಕಾರ್ತಿಕ

ದಾವಣಗೆರೆ ತಾಲ್ಲೂಕಿನ ಆವರಗೊಳ್ಳದಲ್ಲಿ ಪುರವರ್ಗ ಶ್ರೀಮದ್ರಂಭಾಪುರಿ ಲಿಂ. ಜಗದ್ಗುರು ವೀರ ಗಂಗಾಧರಶಿವಾಚಾರ್ಯ ಮಹಾಭಗವತ್ಪಾದಂಗಳವರ ಪುಣ್ಯಸ್ಮರಣೆ ಸಮಾರಂಭದಲ್ಲಿ ಇಂದು ಸಂಜೆ ವಿಷಮರ್ಧನ ಸಂಜೀವಿನಿ ಗದ್ದುಗೆಗೆ ಕಾರ್ತಿಕ ದೀಪೋತ್ಸವ ನಡೆಯುವುದು.

# 'ಕರ್ನಾಟಕ ಸಿರಿ' ಮುಡಿಗೇರಿಸಿಕೊಂಡ ಉಡುಪಿ ನಿತ್ಯಾನಂದ ಕೋಟಿಯಾನ್





ದಾವಣಗೆರೆ, ಜ.1- ಮಯಾಸ್ ಫ್ರೆಂಡ್ಸ್ ಗ್ರೂಪ್ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ 4ನೇ ವರ್ಷದ ರಾಜ್ಯಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಕರ್ನಾಟಕ ಸಿರಿ 2021ರ ಟೈಟಲ್ ಅನ್ನು ಉಡುಪಿಯ ನಿತ್ಯಾನಂದ ಕೋಟಿಯಾನ್ ತಮ್ಮದಾಗಿಸಿಕೊಂಡಿದ್ದು, ಟ್ರೋಫಿ ಸಹಿತ 25 ಸಾವಿರ ನಗದು ಬಹುಮಾನ ಪಡೆದಿದ್ದಾರೆ.

ಬೆಳಗಾವಿಯ ವಿಕಾಸ್ ಸೂರ್ಯವಂಶಿ ರನ್ನರ್ ಅಪ್ ಆಗಿದ್ದು, ಬೆಳಗಾಂನ ಉಮೇಶ್ ಗಂಗನೆ ಬೆಸ್ಟ್ ಪೋಜರ್ ಪ್ರಶಸ್ತಿ ಸಹಿತ 5 ಸಾವಿರ ನಗದು ಬಹುಮಾನ ಪಡೆದಿದ್ದಾರೆ. 55 ರಿಂದ 85 ವರ್ಷದೊಳಗಿನ ತೂಕದವರೆಗೆ 6 ವಿಭಾಗಗಳಲ್ಲಿ ತಲಾ 8 ಸುತ್ತುಗಳಲ್ಲಿ ಸ್ಪರ್ಧೆ ನಡೆಸಲಾಯಿತು.

ಜಿಲ್ಲಾ ಬಾಡಿ ಬಿಲ್ಡಿಂಗ್ ಅಸೋಸಿಯೇಷನ್ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಈ ಸ್ಪರ್ಧೆಯಲ್ಲಿ ಕರ್ನಾಟಕ ಸಿರಿ ಟೈಟಲ್‌ಗೆ ಸ್ಪರ್ಧಾಳುಗಳ ನಡುವೆ ಪೈಪೋಟಿ ನಡೆಯಿತು.

ರಾಜ್ಯ ಬಾಡಿ ಬಿಲ್ಡಿಂಗ್ ಅಸೋಸಿಯೇಷನ್ ಅಧ್ಯಕ್ಷ ಜೆ. ನೀಲಕಂಠೇಶ್, ಕಾರ್ಯದರ್ಶಿ ಜಿ.ಡಿ. ಭಟ್, ಕಾರ್ಯಾಧ್ಯಕ್ಷ ಅಜಿತ್ ಸಿದ್ದಣ್ಣ, ದಿಲೀಪ್, ಹರೀಶ್ ಸೇರಿದಂತೆ 15 ಮಂದಿ ರಾಷ್ಟ್ರೀಯ ತೀರ್ಪುಗಾರರು ಭಾಗವಹಿಸಿದ್ದರು. ಜಿಲ್ಲಾ ಬಾಡಿ ಬಿಲ್ಡಿಂಗ್ ಅಸೋಸಿಯೇಷನ್ ಕಾರ್ಯದರ್ಶಿ ಜಗದೀಶ್ ಹಿರೇಮಠ್, ಪದಾಧಿಕಾರಿಗಳಾದ ಜಗದೀಶ್ ಬಿ. ಹಿರೇಮಠ, ಸಂತೋಷ್ ಏಕಬೋಟೆ, ಮಹೇಶ್, ಬಸವರಾಜ್, ವಿಶ್ವನಾಥ್, ಪಾಲಿಕೆ ಮಾಜಿ ಸದಸ್ಯ ಕೆ.ಜಿ. ಶಿವಕುಮಾರ್, ಅಂತರರಾಷ್ಟ್ರೀಯ ಕ್ರೀಡಾಪಟು ಮಂಜು ಮೊಗವೀರ, ಮೊಹಮದ್ ಜಬಿ ಉಲ್ಲ, ಇತರರಿದ್ದರು.

**ರಾಷ್ಟ್ರಮಟ್ಟಕ್ಕೆ ಐವರ ಆಯ್ಕೆ:** ತೆಲಂಗಾಣದಲ್ಲಿ ಜ.6ರಿಂದ ನಡೆಯಲಿರುವ ಪುರುಷರ ರಾಷ್ಟ್ರೀಯ ಅಂಗ ಸೌಷ್ಠವ ಪ್ರದರ್ಶನಕ್ಕೆ ರಾಜ್ಯ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಐವರು ದೇಹದಾರ್ಢ್ಯ ಪಟುಗಳು ಆಯ್ಕೆಯಾದರು.

ದಾವಣಗೆರೆಯ ಎ. ಮಂಜುನಾಥ್, ಗದಗ್‌ನ ಸಂದೀಪ್ ನವಲೇಕರ್, ಬೆಳಗಾವಿಯ ರಾಂ ಬೆಳಗಾವ್‌ಕರ್, ಬೆಂಗಳೂರಿನ ಪಿ. ಶಶಿಕುಮಾರ್, ಉಡುಪಿಯ ಹಿತೇಶ್ ಉತ್ತಮ ಪ್ರದರ್ಶನ ನೀಡುವ ಮೂಲಕ ಆಯ್ಕೆಯಾದರು.

## ನವ ವರುಷ

ಹೊಸ ವರುಷದ ಮುಂಜಾನೆ
ಒಳಿತಿಗಾಗಿ ಮಾಡೋಣ ಪ್ರಾರ್ಥನೆ
ಸೂರ್ಯನ ಹೊಂಗಿರಣದ ಕಾಂತಿ
ನೀಡಲಿ ಮನಸಿಗೆ ಸ್ಫೂರ್ತಿ

ದೋಷಾರೋಪಣೆ, ವಾದ, ಟೀಕೆ
ಸ್ವಯಂ ಪ್ರತಿಷ್ಠೆಗೆ ಹೇಳಿ ವಿದಾಯ
ಹಿತವಾದ ಮಾತು, ನಗುವಿನಿಂದ
ಆರಂಭವಾಗಲಿ ನೂತನ ವರ್ಷಾರಂಭ

ಒಂದೇ ನಿರೀಕ್ಷೆ ಉತ್ತಮ ಆರೋಗ್ಯ
ಮಧುರವಾಗಿರಲಿ ಬಾಂಧವ್ಯ
ಸೌಹಾರ್ದವಾಗಿರಲಿ ಸ್ನೇಹ ಸಂಬಂಧ
ಶಾಂತಿ, ನೆಮ್ಮದಿ ಮನೆ ಮನದಲ್ಲಿ ತುಂಬಿರಲಿ

ಸಂತಸದಿ ಕಳೆಯಲಿ ಈ ಸಾಲಿನ ಸಮಯ
ಎಲ್ಲರಿಗೂ ಹೊಸ ವರ್ಷದ ಶುಭಾಶಯ...

- ಅನುಪಮ ವಿರೂಪಾಕ್ಷಪ್ಪ, ದಾವಣಗೆರೆ.

## ಕುರಿ ಸಾಕಾಣಿಕೆ ತರಬೇತಿ

ದಾವಣಗೆರೆ, ಜ.1- ರೈತರಿಗೆ ವೈಜ್ಞಾನಿಕ ಕುರಿ ಸಾಕಾಣಿಕೆ ಕುರಿತು ತರಬೇತಿಯನ್ನು ಇದೇ ದಿನಾಂಕ 5 ರಂದು ನಗರದ ಪಶು ಆಸ್ಪತ್ರೆ ಆವರಣದ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ವಿವರಕ್ಕೆ ಸಂಪರ್ಕಿಸಿ : ಫೋನ್ 9353567572.

## ನಗರದಲ್ಲಿ ಇಂದು ಕರ್ನಾಟಕ ರಾಜ್ಯೋತ್ಸವ

ದಾವಣಗೆರೆ, ಜ.1- ನಗರದ ಶ್ರೀ ಶಿವಯೋಗ ಮಂದಿರದ ಆವರಣದಲ್ಲಿ ನಾಳೆ ದಿನಾಂಕ 2 ರ ಭಾನುವಾರ ಸಂಜೆ 6 ಗಂಟೆಗೆ 66 ನೇ ಕರ್ನಾಟಕ ರಾಜ್ಯೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ಜಿಲ್ಲಾಧ್ಯಕ್ಷ ಬಾಬುರಾವ್ ಸುತ್ರಾವೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸಂಸದ ಜಿ.ಎಂ. ಸಿದ್ದೇಶ್ವರ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಎಸ್.ಎ. ರವೀಂದ್ರನಾಥ್ ಭುವನೇಶ್ವರಿ ಭಾವಚಿತ್ರ ಅನಾವರಣಗೊಳಿಸಲಿದ್ದಾರೆ.

ಅಧ್ಯಕ್ಷತೆ : ಕೆ.ಜಿ. ಯಲ್ಲಪ್ಪ. ಮುಖ್ಯ ಅತಿಥಿಗಳು : ಎಸ್.ವಿ. ರಾಮಚಂದ್ರ, ಮಹಾಂತೇಶ್ ಬೀಳಗಿ, ಸಿ.ಬಿ. ರಿಷ್ಯಂತ್, ಎಸ್. ಟಿ. ವೀರೇಶ್, ದೇವರಮನಿ ಶಿವಕುಮಾರ್, ಅಬ್ದುಲ್ ಜಬ್ಬಾರ್, ಡಾ. ವಿಜಯಲಕ್ಷ್ಮಿ ವೀರಮಾಚಿನೇನಿ, ದಿನೇಶ್ ಕೆ.ಶೆಟ್ಟಿ, ಎ. ನಾಗರಾಜ್ ಮತ್ತು ಇತರೆ ಗಣ್ಯರು.

ಸಮಾಜ ಸೇವಕ ಮಹಾಂತೇಶ್ ಒಣ ರೊಟ್ಟಿ, ಪತ್ರಕರ್ತರಾದ ರವಿಬಾಬು, ಶಂಭು, ಪುನೀತ್, ಪವನಕುಮಾರ್, ಬಿ. ಸಿಕಂದರ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸಲಾಗುವುದು ಎಂದರು.

ಶ್ರೀ ಹರ ಮ್ಯೂಸಿಕಲ್ ವರ್ಲ್ಡ್ ವತಿಯಿಂದ ಅಪ್ಪು ನಮನ ವಿಶೇಷ ಸಂಗೀತ ಕಾರ್ಯಕ್ರಮ ಸಹ ನಡೆಯಲಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿ.ಇ. ದಯಾನಂದ್, ಎಂ. ರವಿ, ಚಂದ್ರಶೇಖರ್, ಸುನೀಲ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿಂದು ವೃದ್ಧರಿಗೆ ಶ್ರವಣ ಸಾಧನ ವಿತರಣೆ

ಲಯನ್ಸ್ ಕ್ಲಬ್ ಹಾಗೂ ಶೋಬೋ ಕಾಯಿ ನಿಹಾನ್ ಶಿಟೋರೀಯನ್ ಕರಾಟೆ ಫೆಡರೇಷನ್ ಇಂಡಿಯಾ ಇವರ ಸಂಯುಕ್ತ ಆಶ್ರಯದಲ್ಲಿ ವೃದ್ಧರಿಗೆ ಶ್ರವಣ ಸಾಧನ ವಿತರಣಾ ಕಾರ್ಯಕ್ರಮವು ಇಂದು ಸಂಜೆ 4.30 ಕ್ಕೆ ಲಯನ್ಸ್ ಭವನದಲ್ಲಿ ನಡೆಯಲಿದೆ.

ಅಧ್ಯಕ್ಷತೆಯನ್ನು ಎಸ್. ಓಂಕಾರಪ್ಪ ವಹಿಸುವರು. ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಸಮಾರಂಭವನ್ನು ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಎಸ್. ಟಿ. ವೀರೇಶ್ ಆಗಮಿಸುವರು. ಎಂ.ಕೆ. ಭಟ್, ಪ್ರಕಾಶ್ ಪಿ.ಬಿ., ಆರ್.ಜಿ. ಶ್ರೀನಿವಾಸಮೂರ್ತಿ, ಕೆ.ಪಿ. ಜೋಸ್ ಪ್ರಶಸ್ತಿ ಪತ್ರ ವಿತರಣೆ ಮಾಡುವರು. ವೀರಶೈವ ಕ್ರೆಡಿಟ್ ಕೋ-ಆಪ್ ಸೊಸೈಟಿಯ ಅಧ್ಯಕ್ಷ ಎ.ಎಸ್. ಮೃತ್ಯುಂಜಯ ಅವರು ಶ್ರವಣ ಸಾಧನ ಕೊಡುಗೆ ನೀಡುವರು.

# ಸಮಾಜಮುಖಿ ಚಿಂತನೆಯಿಂದ ಉನ್ನತಿ



### ಡಾ. ಚಿನ್ಮಯ್ ಚಿಗಟೇರಿ

ದಾವಣಗೆರೆ, ಜ. 1- ವಿದ್ಯಾರ್ಥಿಗಳಲ್ಲಿ ಜ್ಞಾನಾಸಕ್ತಿ, ಸಾಮಾಜಿಕ ಜವಾಬ್ದಾರಿ ಮತ್ತು ಹೊಸ ಆಲೋಚನೆಗಳನ್ನು ರೂಢಿಸುವ ಜೊತೆಗೆ ಸಮಾಜ ಪರ, ಜನಪರ ಕಾಳಜಿಯ ಅರಿವು ಮೂಡಿಸುವುದು ಮುಖ್ಯ ಎಂದು ಜಯರತ್ನ ಚಿಗಟೇರಿ ಟ್ರಸ್ಟ್‌ನ ಡಾ. ಚಿನ್ಮಯ್ ಚಿಗಟೇರಿ ಹೇಳಿದ್ದಾರೆ.

ದಾವಣಗೆರೆ ವಿಶ್ವವಿದ್ಯಾನಿಲಯ ಆವರಣದಲ್ಲಿ ಇಂದು ಏರ್ಪಡಿಸಿದ್ದ ಸಂಶೋಧನೆ, ಶೈಕ್ಷಣಿಕ ಅಧ್ಯಯನ, ಸಾಮಾಜಿಕ ಜವಾಬ್ದಾರಿ ನಿರ್ವಹಣೆಗೆ ಸಂಬಂಧಿಸಿದಂತೆ ದಾವಣಗೆರೆ ವಿಶ್ವವಿದ್ಯಾನಿಲಯ ಮತ್ತು ಜಯರತ್ನ ಚಿಗಟೇರಿ ಚಾರಿಟಬಲ್ ಟ್ರಸ್ಟ್ ಒಡಂಬಡಿಕೆಗೆ ಕುಲಸಚಿವರಾದ ಪ್ರೊ. ಗಾಯತ್ರಿ ದೇವರಾಜ್ ಅವರೊಂದಿಗೆ ಸಹಿ ಹಾಕಿದ ನಂತರ ನಡೆದ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಮಾಜದ ಅಭಿವೃದ್ಧಿಗೆ ಸಹಕಾರಿ ಯಾಗುವ ಸಂಶೋಧನೆಗೆ ಪ್ರೋತ್ಸಾಹ ನೀಡಲು ತಮ್ಮ ಸಂಸ್ಥೆಯು ವಿಶ್ವವಿದ್ಯಾನಿಲಯದ ಜೊತೆ ಒಡಂಬಡಿಕೆ ಮಾಡಿಕೊಂಡಿದೆ ಎಂದು ಹೇಳಿದರು.

ಗಳಿಸಿದ್ದರಲ್ಲಿ ಒಂದು ಭಾಗವನ್ನು ಸಮಾಜಕ್ಕೆ ವಿನಿಯೋಗಿಸಿದಾಗ ಸಂತೃಪ್ತಿಯ ಮನೋಭಾವ ಸಿಗುತ್ತದೆ ಎಂದ ಅವರು, ಯುವ ಜನಾಂಗಕ್ಕೆ, ಸಮಾಜಕ್ಕೆ ಹಿರಿಯರ ಸೇವೆಗಳು ಪ್ರೇರಣೆಯಾದಾಗ ಸಾಧನೆಗೆ ಮಾರ್ಗ ಕಾಣುತ್ತದೆ ಎಂದವರು ತಿಳಿಸಿದರು.

ಮುರುಘರಾಜೇಂದ್ರ ಚಿಗಟೇರಿ ಮಾತನಾಡಿ, ಅನುಭವ ಆಧರಿಸಿದ ಕಲಿಕೆಯು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಶೈಕ್ಷಣಿಕ ವಿಧಾನಗಳು ಬದಲಾಗಬೇಕು. ನೂತನ ಶಿಕ್ಷಣ ನೀತಿ ಅದಕ್ಕೆ ಸಹಕಾರಿ ಆಗಬಹುದು ಎಂದು ಅಭಿಪ್ರಾಯಪಟ್ಟರು.

ಕುಲಸಚಿವರಾದ ಪ್ರೊ. ಗಾಯತ್ರಿ ದೇವರಾಜ ಹಾಗೂ ಜಯಪ್ರಕಾಶ್ ಚಿಗಟೇರಿ ಮಾತನಾಡಿದರು.

ಚಿಗಟೇರಿ ಕುಟುಂಬದ ಜಯದೇವ ಚಿಗಟೇರಿ, ಸೋಮೇಶ್ವರ ಚಿಗಟೇರಿ, ಶಾಂತಾ ಯಾವಗಲ್, ಸುಧಾ ಚಿಗಟೇರಿ, ಸುರೇಖಾ ಚಿಗಟೇರಿ, ಶುಭಾಂಗಿನಿ ಚಿಗಟೇರಿ, ಪ್ರಮೋದಲಕ್ಷ್ಮಿ ರಾಕೇಶ, ರಾಕೇಶ್, ವರ್ಷಾ ಚಿಗಟೇರಿ, ಪ್ರಶಾಂತ ಬಿದರಿ, ದಾವಣಗೆರೆ ವಿಶ್ವವಿದ್ಯಾನಿಲಯದ ಡೀನ್‌ಗಳಾದ ಪ್ರೊ. ಕೆ.ಬಿ.ರಂಗಪ್ಪ, ಪ್ರೊ. ಕೆ. ಲಕ್ಷ್ಮಣ, ಪ್ರೊ. ರಾಮಲಿಂಗಪ್ಪ, ಪ್ರಾಧ್ಯಾಪಕರಾದ ಡಾ. ಸುಚಿತ್ರಾ, ಡಾ. ಶಶಿಧರ, ಡಾ. ಸೆಲ್ವಿ, ಡಾ. ಹುಚ್ಚೇಗೌಡ, ಡಾ. ಶಿವಕುಮಾರ ಕಣಸೋಗಿ, ಡಾ. ವೆಂಕಟರಾವ್ ಪಲಾಟಿ, ಡಾ. ನಾಗಭೂಷಣಗೌಡ, ಡಾ. ಅಂಬಿಕಾ, ಡಾ. ಹೊನ್ನೂರಸ್ವಾಮಿ ಉಪಸ್ಥಿತರಿದ್ದರು. ಪ್ರೊ. ರಂಗಪ್ಪ ವಂದಿಸಿದರು.

# ಆತ್ಮರಕ್ಷಣೆಗಾಗಿ ಕರಾಟೆ ಅನಿವಾರ್ಯ



ದಾವಣಗೆರೆ, ಜ.1- ಆತ್ಮರಕ್ಷಣೆಗಾಗಿ ಪ್ರಸ್ತುತ ದಿನಗಳಲ್ಲಿ ಕರಾಟೆ ಅನಿವಾರ್ಯವಾಗಿದೆ. ಶಾಲಾ ಮಕ್ಕಳಲ್ಲಿ ಪ್ರಾಥಮಿಕ ಹಂತದಲ್ಲಿಯೇ ತರಬೇತಿ ನೀಡುವುದು ಅವಶ್ಯಕವೆಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ. ಬಾವಿ ಅಭಿಪ್ರಾಯಪಟ್ಟರು.

ನಗರದ ಲಯನ್ಸ್ ಕ್ಲಬ್ ಭವನದಲ್ಲಿ ಇಂದು ಏರ್ಪಡಿಸಿದ್ದ ಬಾಲಕ-ಬಾಲಕಿಯರಿಗೆ ಕರಾಟೆ ತರಬೇತಿ ಶಿಬಿರದ ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಓರ್ವ ಮಹಿಳೆ ರಾತ್ರಿ 12 ಗಂಟೆಯ ನಂತರ ಓಡಾಡಿಕೊಂಡು ಸುರಕ್ಷಿತವಾಗಿ ಮನೆಗೆ ಬಂದರೆ ಅಂದಿಗೆ ಸ್ವಾತಂತ್ರ್ಯ ಸಿಕ್ಕಿದ್ದು ಸಾರ್ಥಕವಾಗುತ್ತದೆ ಎಂದು ಮಹಾತ್ಮ ಗಾಂಧಿ ಹೇಳಿದ್ದರು. ಆದರೆ, ಇಂದು ಏನಾಗಿದೆ ರಾತ್ರಿ ಮನೆ ಬಿಟ್ಟು ಹೋದ ಮಹಿಳೆ ವಾಪಸ್ ಬರುತ್ತಾಳೋ, ಇಲ್ಲವೋ ಎಂಬುದು ಗ್ಯಾರಂಟಿ ಇಲ್ಲದಂತಾಗಿದೆ ಅಂದಾಗ ಸ್ವಾತಂತ್ರ್ಯ ಸಿಕ್ಕಿದ್ದಕ್ಕೆ ಏನು ಬೆಲೆ ಬಂದಂತಾಗಿದೆ ಎಂದು ಪ್ರಶ್ನಿಸಿದರು. ಈ ನಿಟ್ಟಿನಲ್ಲಿ ಶಾಲಾ - ಕಾಲೇಜುಗಳಲ್ಲಿ ಕ್ರೀಡಾ ಚಟುವಟಿಕೆ ಗಳ ಜೊತೆಗೆ ಆತ್ಮ ರಕ್ಷಣೆಗಾಗಿ ಕರಾಟೆ ಕಲಿಸುವುದನ್ನು ಹೇಳಿ ಕೊಡಬೇಕೆಂದು ಅವರು ಕರೆ ನೀಡಿದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯ ದಿನೇಶ್ .ಕೆ ಶೆಟ್ಟಿ ಮಾತನಾಡಿ, ಲಯನ್ಸ್ ಕ್ಲಬ್‌ಗಳ ಸೇವೆ ನಿರಂತರವಾಗಿ ನಡೆಯುತ್ತಲೇ ಇವೆ. ಅವುಗಳಿಗೆ ಪ್ರಚಾರದ ಕೊರತೆ ಎದ್ದು ಕಾಣುತ್ತದೆ ಎಂದರು.

ತರಬೇತುದಾರ ಕೆ.ಪಿ. ಜೋಸ್, ಕೆ.ಟಿ. ಮಹಾಲಿಂಗೇಶ್, ಎಸ್.ಜೆ. ಮಲ್ಲಿಕಾರ್ಜುನ್, ಸಂತೋಷ್ ಉಪಸ್ಥಿತರಿದ್ದರು. ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ ಅಧ್ಯಕ್ಷತೆ ವಹಿಸಿದ್ದರು.

ಖಜಾಂಚಿ ಕಣವಿ ನಟರಾಜ್ ವಂದಿಸಿದರು. ಕಾರ್ಯದರ್ಶಿ ಕೋರಿ ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.


## ನಗರಕ್ಕೆ ಇಂದು ಲಯನ್ಸ್ ಉಪ ರಾಜ್ಯಪಾಲ ಎಂ.ಕೆ. ಭಟ್



ದಾವಣಗೆರೆ ಲಯನ್ಸ್ ಕ್ಲಬ್‌ಗೆ ಲಯನ್ಸ್ ಜಿಲ್ಲೆ 317-ಸಿ ಯು 1ನೇ ಉಪ ರಾಜ್ಯಪಾಲ ಎಂ.ಕೆ.ಭಟ್ ಅವರು ಅಧಿಕೃತ ಭೇಟಿ ನೀಡುವ ಕಾರ್ಯಕ್ರಮವು ಇಂದು ಸಂಜೆ 7.05ಕ್ಕೆ ಲಯನ್ಸ್ ಭವನದಲ್ಲಿ ನಡೆಯಲಿದೆ.

ಅಧ್ಯಕ್ಷತೆಯನ್ನು ಎಸ್. ಓಂಕಾರಪ್ಪ ವಹಿಸುವರು. ಡಾ. ಬಿ.ಎಸ್. ನಾಗಪ್ರಕಾಶ್, ಇ.ಎಂ. ಮಂಜುನಾಥ, ಎಸ್. ವೆಂಕಟಾಚಲಂ ಉಪಸ್ಥಿತರಿರುವರು.

## ರಂಭಾಪುರಿ ಜಗದ್ಗುರುಗಳವರ 66ನೇ ಜನ್ಮ ದಿನಾಚರಣೆ



ಬಾಳೆಹೊನ್ನೂರು, ಜ.1- ಶ್ರೀ ಜಗದ್ಗುರು ರೇಣುಕಾಚಾರ್ಯರು ಆವಿರ್ಭವಿಸಿದ ತೆಲಂಗಾಣ ರಾಜ್ಯ ಭುವನಗಿರಿ ಜಿಲ್ಲೆ ಕೊಲನುಪಾಕ ಚಂಡಿಕಾಂಬಾ ಸಮೇತ ಸ್ವಯಂ ಶ್ರೀ ಸೋಮೇಶ್ವರ ದೇವಸ್ಥಾನದ ಪರಿಸರದಲ್ಲಿ ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳ 66ನೇ ಜನ್ಮದಿನೋತ್ಸವವನ್ನು ಇದೇ ದಿನಾಂಕ 7 ರಂದು ಆಚರಿಸಲಾಗುವುದು.

ಕಾರ್ಯಕ್ರಮದ ಅಂಗವಾಗಿ ನಾಡಿದ್ದು ದಿನಾಂಕ 3 ರಿಂದ 7ರವರೆಗೆ ರಂಭಾಪುರಿ ಜಗದ್ಗುರುಗಳವರ ಇಷ್ಟಲಿಂಗ ಪೂಜೆ ಹಾಗೂ ಶ್ರೀ ಸ್ವಯಂಭು, ಶ್ರೀ ಸೋಮೇಶ್ವರ ಮಹಾಲಿಂಗಕ್ಕೆ ಮಹಾ ರುದ್ರಾಭಿಷೇಕ, ವಿಶೇಷ ಪೂಜೆ, ಸಹಸ್ರ ಪುಷ್ಪಾರ್ಚನೆ ಹಾಗೂ ಶ್ರೀ ಚಂಡಿಕಾಂಬಾ ದೇವಿಗೆ ಕುಂಕುಮಾರ್ಚನೆ ನಡೆಯುವುದು.

## ಶಾಲಾ ಮಕ್ಕಳಿಗಾಗಿ 16,640 ಡೋಸ್ ಲಸಿಕೆ ಹಂಚಿಕೆ

### ತಾಲ್ಲೂಕಿನಲ್ಲಿ ನಾಳೆಯಿಂದ ಲಸಿಕೆ ವಿತರಣೆ

ದಾವಣಗೆರೆ, ಜ. 1- ತಾಲ್ಲೂಕಿನಲ್ಲಿ 15 ರಿಂದ 18 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಕೋವಿಡ್-19 ನಿರೋಧಕ ಲಸಿಕೆಯನ್ನು ಉಚಿತವಾಗಿ ನೀಡುವ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 3 ರಿಂದ ಪ್ರಾರಂಭಿಸಲಾಗುತ್ತಿದ್ದು, ಇದಕ್ಕಾಗಿ ತಾಲ್ಲೂಕಿಗೆ ಒಟ್ಟು 16,640 ಡೋಸ್ ಕೋವ್ಯಾಕ್ಸಿನ್ ಲಸಿಕೆ ಹಂಚಿಕೆ ಮಾಡಲಾಗಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಲ್.ಡಿ. ವೆಂಕಟೇಶ್ ತಿಳಿಸಿದ್ದಾರೆ.

15 ರಿಂದ 18 ವರ್ಷದೊಳಗಿನ ಅಥವಾ 2007 ಮತ್ತು ಅದಕ್ಕೂ ಮುನ್ನ ಹುಟ್ಟಿದ ಎಲ್ಲ ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆಯನ್ನು ಶಾಲೆ, ಕಾಲೇಜುಗಳಲ್ಲಿ ಅಥವಾ ಸಮೀಪದ ಕೋವಿಡ್ ಲಸಿಕಾ ಕೇಂದ್ರಗಳಲ್ಲಿ ನೀಡಲಾಗುವುದು. ಲಸಿಕೆ ಪಡೆಯುವ ಮಕ್ಕಳ ತಂದೆ, ತಾಯಿಯರ, ಪೋಷಕರ, ಶಾಲಾ ಶಿಕ್ಷಕರ ಅಥವಾ ಮುಖ್ಯೋಪಾಧ್ಯಾಯರ ಮೊಬೈಲ್ ಸಂಖ್ಯೆಯನ್ನು ಬಳಸಿ ಲಸಿಕಾಕರಣ ನಡೆಸುವಂತೆ ಸೂಚನೆ ನೀಡಲಾಗಿದೆ. ನಗರ ಪ್ರದೇಶಕ್ಕೆ 8,240 ಡೋಸ್ ಹಾಗೂ ಗ್ರಾಮೀಣ ಪ್ರದೇಶಕ್ಕೆ 8,400 ಡೋಸ್ ಸೇರಿದಂತೆ, ಒಟ್ಟು 16640 ಡೋಸ್ ಲಸಿಕೆ ವಿತರಿಸಲಾಗಿದೆ ಎಂದವರು ತಿಳಿಸಿದ್ದಾರೆ.

## ವಿಷ್ಣು ಸ್ಮಾರಕ ನಿರ್ಮಾಣಕ್ಕೆ ಮೀನಾಮೇಷ

### ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್.ಗೋವಿಂದರಾಜ್ ಖಂಡನೆ



ದಾವಣಗೆರೆ, ಜ.1- ಸಾಹಸಸಿಂಹ ಡಾ. ವಿಷ್ಣುವರ್ಧನ್ ಅವರ ಸ್ಮಾರಕ ನಿರ್ಮಾಣ ಮಾಡಲು ಸರ್ಕಾರ ಮೀನಾಮೇಷ ಎಣಿಸುತ್ತಿರುವುದು ಖೇದಕರ ಎಂದು ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಗೋವಿಂದರಾಜ್ ಅಭಿಪ್ರಾಯಪಟ್ಟರು.

ಇಲ್ಲಿನ ಭಗತ್‌ಸಿಂಗ್ ಆಟೋ ನಿಲ್ದಾಣದಲ್ಲಿ ಅಖಿಲ ಕರ್ನಾಟಕ ವಿಷ್ಣುವರ್ಧನ್ ಅಭಿಮಾನಿಗಳ ಸಂಘದ ಜಿಲ್ಲಾ ಸಮಿತಿಯಿಂದ ಏರ್ಪಡಿಸಲಾಗಿದ್ದ ಡಾ. ವಿಷ್ಣುವರ್ಧನ್ ಅವರ 12ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದ ಅವರು, ವಿಷ್ಣುವರ್ಧನ್ ಅವರು ವಿಧಿವಶರಾಗಿ ದಶಕ ಕಳೆದಿದ್ದರೂ ಕೂಡ ಇದುವರೆಗೂ ವಿಷ್ಣು ಸ್ಮಾರಕ ನಿರ್ಮಾಣ ಮಾಡಲು ಸರ್ಕಾರ ಹಿಂಜರಿಯುತ್ತಿದ್ದು, ಕರ್ನಾಟಕದಾದ್ಯಂತ ಅಭಿಮಾನಿಗಳು ಸಿಡಿದೇಳುವ ಕಾಲ ದೂರವಿಲ್ಲ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಖಿಲ ಕರ್ನಾಟಕ ವಿಷ್ಣುವರ್ಧನ್ ಅಭಿಮಾನಿಗಳ ಸಂಘದ ಜಿಲ್ಲಾ ಸಮಿತಿಯ ಅಧ್ಯಕ್ಷ ವಿ. ತಿರುಮಲೇಶ್ (ಸ್ವಾಮಿ) ಮಾತನಾಡಿ, ವಿಷ್ಣುವರ್ಧನ್ ಅವರಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ನೀಡಬೇಕೆಂದು ಒತ್ತಾಯಿಸಿದರು.


ಕಾರ್ಯಕ್ರಮದಲ್ಲಿ ನಗರಸಭೆ ಮಾಜಿ ಸದಸ್ಯ ಎನ್. ಜೆ. ನಿಂಗಪ್ಪ, ಜಿಲ್ಲಾ ಪತ್ರಬರಹಗಾರ ಬಿ.ವಿ. ರಾಜಶೇಖರ್, ಪತ್ರಕರ್ತ ಎಸ್. ಹನುಮಂತಪ್ಪ ಹಾಲಿವಾಣ, ವಿಜಯ ಕುಮಾರ್ ಚಾರ್ಮನಿ, ಪ್ರವೀಣ್ ಕುಮಾರ್, ರತ್ನಾಕರ್ ಬಗಾರೆ, ವಿನಾಯಕ ಹೆಚ್.ಪಗಡೆ, ಮಂಜಣ್ಣ, ಬಾಬು, ನಟರಾಜ್ ಉಪಸ್ಥಿತರಿದ್ದರು.

## ನ್ಯಾಯಾಲಯ ಕಟ್ಟಡ ಸಂಕೀರ್ಣ ನಿರ್ಮಾಣಕ್ಕೆ ಅನುಮೋದನೆಗಾಗಿ ಸಿಎಂಗೆ ಸಂಸದರ ಮನವಿ

ದಾವಣಗೆರೆ, ಜ.1- ಜಿಲ್ಲಾ ನ್ಯಾಯಾಲಯ ಕಟ್ಟಡ ಸಂಕೀರ್ಣ ನಿರ್ಮಾಣಕ್ಕಾಗಿ ಆಡಳಿತಾತ್ಮಕ ಅನುಮೋದನೆ ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಮನವಿ ಮಾಡಿದ್ದಾರೆ.

ಕುಂದುವಾಡ ಗ್ರಾಮದ ಸರ್ವೇ ನಂ.104 ಮತ್ತು 111ರ ಒಟ್ಟು 8.10 ಗುಂಟೆ ಜಾಗದಲ್ಲಿ 15 ಕೋರ್ಟ್ ಹಾಲ್‌ಗಳುಳ್ಳ ಜಿಲ್ಲಾ ನ್ಯಾಯಾಲಯ ಕಟ್ಟಡ ಸಂಕೀರ್ಣವನ್ನು ನಿರ್ಮಾಣ ಮಾಡಲು ಲೋಕೋಪಯೋಗಿ ಇಲಾಖೆ 25 ಕೋಟಿ ರೂ. ಮೊತ್ತದ ಅಂದಾಜು ಪಟ್ಟಿ ತಯಾರಿಸಿ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಿತ್ತು. ಕಡತವು ಲೋಕೋಪಯೋಗಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಬಳಿ ಇದ್ದು, ಮುಂದಿನ ಕ್ರಮಕ್ಕೆ ಸಂಸದರು ಮನವಿ ಮಾಡಿದ್ದಾರೆ. ಸಂಸದ ಸಿದ್ದೇಶ್ವರ ಅವರು ಮುಖ್ಯಮಂತ್ರಿಗಳಿಗೆ ಮನವಿ ಮಾಡಿರುವುದಕ್ಕೆ ವಕೀಲರ ಸಂಘದ ನಿಕಟಪೂರ್ವ ಉಪಾಧ್ಯಕ್ಷ ಹೆಚ್. ದಿವಾಕರ್, ಬಿ.ಎಸ್. ಲಿಂಗರಾಜ್, ಬಸವರಾಜ್ ಅವರು ಜಿಲ್ಲಾ ವಕೀಲರ ಸಂಘದ ಪರವಾಗಿ ಅಭಿನಂದಿಸಿದ್ದಾರೆ.

# ಸೂರ್ಯ-ಚಂದ್ರ ಇರುವವರೆಗೆ ಜಕಣಾಚಾರಿ ಅಮರ: ಜಿಲ್ಲಾಧಿಕಾರಿ ಬೀಳಗಿ



ದಾವಣಗೆರೆ, ಜ. 1- ಸೂರ್ಯ, ಚಂದ್ರ, ಭೂಮಿ ಇರುವವರೆಗೂ ಅಮರಶಿಲ್ಪಿ ಜಕಣಾಚಾರಿ ಅಮರರಾಗಿರುತ್ತಾರೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಶನಿವಾರ ಆಯೋಜಿಸಲಾಗಿದ್ದ ಅಮರಶಿಲ್ಪಿ ಜಕಣಾಚಾರಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಹಾನ್ ವ್ಯಕ್ತಿಗಳನ್ನು ನಿರ್ದಿಷ್ಟ ಸಮುದಾಯಕ್ಕೆ ಸೀಮಿತಗೊಳಿಸಬಾರದು. ಸಮಾಜಕ್ಕೆ ಅವರು ನೀಡಿದ ಕೊಡುಗೆಯನ್ನು ಸ್ಮರಿಸಬೇಕು. ಕಷ್ಟದಲ್ಲಿರುವ ಜನರಿಗೆ ಮೇಲುಸ್ತರದಲ್ಲಿರುವ ಜನರು ಸಹಾಯ ಮಾಡುವ ಮನಸ್ಸು ಹೊಂದಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಸಿಇಒ ಡಾ.ವಿಜಯ ಮಹಾಂತೇಶ್ ದಾನಮ್ಮನವರ್ ಮಾತನಾಡಿ, ಜಕಣಾಚಾರಿ ದೇಶಕಂಡ ದಂತಕಥೆ, ಚಾಲುಕ್ಯ, ಹೊಯ್ಸಳ ಆಡಳಿತದಲ್ಲಿ ಶಿಲ್ಪಕಲೆ ನಿರ್ಮಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಬೇಲೂರು, ಹಳೇಬೀಡುಗಳಲ್ಲಿ ಅವರ ಶಿಲ್ಪಕಲೆ ವೈವಿಧ್ಯತೆ ಹಾಗೂ ವೈಭವವನ್ನು ಕಾಣಬಹುದಾಗಿದೆ. ವಿಶ್ವಕರ್ಮ ಅಭಿವೃದ್ದಿ ನಿಗಮ ಸ್ಥಾಪನೆ ಮಾಡುವ ಮೂಲಕ ಸರ್ಕಾರ ಈ ಸಮುದಾಯದ ಅಭಿವೃದ್ಧಿಗೆ ಕ್ರಮ ಕೈಗೊಂಡಿದೆ ಎಂದರು.

ವಿಶ್ವಕರ್ಮ ಸಮಾಜದ ಜಿಲ್ಲಾ ಅಧ್ಯಕ್ಷ ಶಿವಾನಂದ ಮಾತನಾಡಿ, ಕನ್ನಡನಾಡು ದೇಶದಲ್ಲಿಯೇ ಶಿಲ್ಪಕಲೆಯ ಶ್ರೀಮಂತಿಕೆ ಹೊಂದಿದ್ದು ಅದನ್ನು ನೋಡಲು ವಿದೇಶಿಯರು ಬರುತ್ತಿದ್ದಾರೆ. ಇದರ ಕೀರ್ತಿ ಅಮರಶಿಲ್ಪಿ ಜಕಣಾಚಾರಿಯವರಿಗೆ ಸಲ್ಲುತ್ತದೆ. ಸರ್ಕಾರದ ವತಿಯಿಂದ ಅವರ ಜಯಂತಿ ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಸರ್ಕಾರಿ ಅಭಿಯೋಜಕ ಎಸ್.ಪಿ.ಪಾಟೀಲ್ ಮಾತನಾಡಿ, ಬಸವಣ್ಣನವರು ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಆ ಕಾಯಕ ಪ್ರಜ್ಞೆಯನ್ನು ವಿಶ್ವಕರ್ಮ ಸಮುದಾಯದಲ್ಲಿ ಹೆಚ್ಚಿನ ಮಟ್ಟದಲ್ಲಿ ಕಾಣಬಹುದಾಗಿದೆ ಎಂದರು.

ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ಡಿಯುಡಿಸಿ ಯೋಜನಾಧಿಕಾರಿ ನಜ್ಮಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ವಿಶ್ವಕರ್ಮ ಸಮಾಜದ ನಾಗೇಂದ್ರಚಾರಿ, ವಿರೇಂದ್ರಚಾರಿ, ಸಾಲುಮರದ ವೀರಾಚಾರಿ, ತಹಶೀಲ್ದಾರ್ ಬಿ.ಎಸ್. ಗಿರೀಶ್, ಹರಿಹರ ತಹಶೀಲ್ದಾರ್ ರಾಮಚಂದ್ರ ಹಾಗೂ ಇತರರು ಹಾಜರಿದ್ದರು.

## ಅಕ್ಕಿ ತುಂಬಿದ್ದ ಲಾರಿ ಕಳ್ಳತನ: ಆರೋಪ

ದಾವಣಗೆರೆ, ಜ.1- ಹರಿಹರದ ದೋಸ್ತಾನ್ ಅಕ್ಕಿ ಗಿರಣಿ ಆವರಣದಲ್ಲಿ ಡಿ. 30ರಂದು 80 ಪ್ಯಾಕೆಟ್ ಅಕ್ಕಿ ತುಂಬಿದ್ದ ಲಾರಿ ಕಳ್ಳತನವಾಗಿದೆ ಎಂದು ನಿಟುವಳ್ಳಿಯ ಕೆ.ಎಂ. ಪ್ರಶಾಂತ್ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಮಾರನಹಳ್ಳಿ ವಿಜಯಕುಮಾರ್, ಚಂದ್ರಪ್ಪ, ರಂಗನಾಥ ಸೇರಿ ಅಕ್ಕಿ ತುಂಬಿದ ಲಾರಿಯನ್ನು ಕಳ್ಳತನ ಮಾಡಿದ್ದಾರೆ. ಇದನ್ನು ತಡೆಯಲು ಹೋದ ಲಾರಿ ಡ್ರೈವರ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಕಾಶ್, ವೀರಭದ್ರಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.




ಹೃದಯಪೂರ್ವಕ ಅಭಿನಂದನೆಗಳು

ದಾವಣಗೆರೆ ಮಹಾನಗರ ಪಾಲಿಕೆಯಿಂದ 66ನೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುವ

ಶ್ರೀಯುತ ಡಾ॥ ರವಿ ಆರ್.

ಎಂಬಿಬಿಎಸ್, ಡಿಎ, ಎಂಡಿ, ಎಫ್‌ಐಸಿಎ (ಕಾರ್ಡಿಯಾಕ್ ಅನಸ್ತೇಷಿಯಾ, ಎಸ್‌ಐಎಂಎಸ್‌ಟಿ) ಎಫ್‌ಸಿಪಿಪಿ (ಯುಎಸ್‌ಎ) ಎಫ್‌ಸಿಸಿಎಂ (ಕ್ರಿಟಿಕಲ್ ಕೇರ್ ಮೆಡಿಸಿನ್), ಪ್ರೊಫೆಸರ್ ಮತ್ತು ತುಮಕೂರು ಅನಸ್ತೇಷಿಯಾ ಅಂಡ್ ಕ್ರಿಟಿಕಲ್ ಕೇರ್ ಮೆಡಿಸಿನ್, ಇನ್ ಎಸ್‌ಐಎಂಎಸ್ ಆರ್‌ಹೆಚ್‌ನ ವಿಭಾಗದ ಮುಖ್ಯಸ್ಥರು., ಐಸಿಯು ಕನ್ಸಲ್ಟೆಂಟ್ ಇನ್ ಟಿಹೆಚ್‌ಎಸ್ ಹಾಸ್ಪಿಟಲ್

ಇವರಿಗೆ ಹೃದಯಪೂರ್ವಕ ಅಭಿನಂದನೆಗಳು...

ಧರ್ಮಪತ್ನಿ : ಡಾ॥ ಅನಿತಾ ರವಿ, MD., Prof of OBG, JJM Medical College

ಮಗಳು : ಮನೋಘ ಆರ್.

ಆರ್. ಬಸವರಾಜ್, BBM, LLB., ಅನ್ನಪೂರ್ಣ ಮತ್ತು ಗೌತಮ್, BE.,

ಸುಧಾ ಮತ್ತು ಸ್ವಾಮಿ, BE., ಬೆಂಗಳೂರು.

ಮಾನಸ, BE., MS (USA) ಮತ್ತು ಕುಟುಂಬದವರು

ರಾಮಗಿರಿ ಕುಟುಂಬ ಆನೆಕೊಂಡ ಮತ್ತು ಈಚಘಟ್ಟ ಕುಟುಂಬದವರು, ದಾವಣಗೆರೆ.



ನ್ಯು ರವಿ ಹೇರ್ ಡ್ರೆಸಸ್ ಸ್ಥಳ ಬದಲಾವಣೆ

ನಮ್ಮೆಲ್ಲಾ ಗ್ರಾಹಕರಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು
ಹಾಗೂ ನಮ್ಮ ಅಂಗಡಿಯನ್ನು ಹದಡಿ ರಸ್ತೆಯಿಂದ ವಿದ್ಯಾನಗರ
2ನೇ ಬಸ್ ನಿಲ್ದಾಣ ಕಾವೇರಿ ಟವರ್ಸ್‌ಗೆ ಸ್ಥಳಾಂತರಿಸಲಾಗಿದೆ.
ಗ್ರಾಹಕರು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ.
ಪಿ.ಎನ್. ಜಯರಾಮುಲು ಮತ್ತು ಪಿ.ಎನ್. ರಾಜಕುಮಾರ್, ನಾಗೇಶ್

ನ್ಯು ರವಿ ಹೇರ್ ಡ್ರೆಸಸ್

ವಿದ್ಯಾನಗರ 2ನೇ ಬಸ್ ನಿಲ್ದಾಣ, ಕಾವೇರಿ ಟವರ್ಸ್, ದಾವಣಗೆರೆ.

96631 21848, 91089 46529, 80888 68364



SHREE VEERABHADRESHWARA CONSULTANCY SERVICES

CIVIL ENGINEERS AND DEVELOPERS

# 80/18, Opp. P.J. Lodge, A.V.K. College Road, P.J. Extension, DAVANGERE-577 002.

Cell: 9916173399, 9343277422

WE OFFER THE FOLLOWING SERVICE :



✦ CONSTRUCTION CONSULTANTS
✦ ARCHITECTURAL VASTU PLAN
✦ ESTIMATION & VALUATION
✦ 3D VIEW & INTERIOR DESIGN .
✦ ASSISTANCE FOR BUILDING LICENSE PLAN
✦ ASSISTANCE FOR LAY OUT DESIGN & LAND DEVELOPMENT
✦ A4 TO AO PLOTTER PRINTS & BLUE PRINTS



WANTED

Data Entry Operator & Marketing Executive

Requirments/Skills of Data Entry Operator :

* PUC/Diploma or any Degree
* Minimum1 year Experience
* Professional in MS office
* Should Know the English Typing with good speed
* Tally
* Should have the ability of filling the ESIC/EPF and GST returns.

Requirments/Skills of Marketing Executive :

* Any Degree * Minimum 1 year Experience in Marketing of Manpower Services or any Services /products. * Professional in MS Office * Should Speak English Fluently * Should have Exellent Communication & Convincing Skills * Should have own Bike * Should be able to travel in Diffenrent Cities of Karnataka as per Schedule.

Salary will be decided after Face to Face Interview

Ensafeguard Security Pvt. Ltd.,

# 979/2, 1st floor, Ambedkar Circle, Opp. : Jayadeva Petrol Bunk 1st cross, KTJ Nagar, Davangere-2.

Contact : 9742307843, 8050785498

# ತಿಂಗಳಿನಿಂದ ಇಳಿಯದ ತರಕಾರಿ ದರ

## ಬಡ-ಮಧ್ಯಮ ವರ್ಗಕ್ಕೆ ಚಿಂತೆ, ಹೋಟೆಲ್ ವ್ಯಾಪಾರಿಗಳು ಹೈರಾಣ



ದಾವಣಗೆರೆ, ಜ.1- ಕಳೆದೊಂದು ತಿಂಗಳಿನಿಂದ ಏರಿಕೆ ಕಂಡಿದ್ದ ತರಕಾರಿ ಬೆಲೆ ಇಳಿಕೆಯಾಗಲಿದೆ ಎಂದುಕೊಂಡಿದ್ದ ಗ್ರಾಹಕರಿಗೆ ತೀವ್ರ ನಿರಾಶೆಯಾಗಿದೆ.

ತಿಂಗಳಾದರೂ ವಿವಿಧ ತರಕಾರಿ ಬೆಲೆ ನೂರರ ಗಡಿ ಬಿಟ್ಟು ಇಳಿಯುತ್ತಿಲ್ಲ. ಬಡ ಹಾಗೂ ಮಧ್ಯಮ ವರ್ಗದವರ ಮನೆಯಲ್ಲಿ ಅಡುಗೆಗೆ ತರಕಾರಿ ಬಳಕೆ ಕಡಿಮೆಯಾಗುತ್ತಿದ್ದರೆ, ಇತ್ತ ಹೋಟೆಲ್‌ನವರು ಹೈರಾಣಾಗಿದ್ದಾರೆ.

ಇನ್ನು ಕೈಗಾಡಿ ಅಥವಾ ರಸ್ತೆ ಬದಿಯಲ್ಲಿ ತರಕಾರಿ ಮಾರಾಟದಿಂದಾಗಿ ಜೀವನ ನಡೆಸುತ್ತಿದ್ದ ಅನೇಕರು ದರ ಏರಿಕೆಯಿಂದಾಗಿ ಕೊಳ್ಳುವವರಿಲ್ಲದೆ ವ್ಯಾಪಾರ ಕೈ ಚೆಲ್ಲಿ ಕುಳಿತಿದ್ದು, ದರ ಇಳಿಕೆಗಾಗಿ ಪ್ರಾರ್ಥಿಸುತ್ತಿದ್ದಾರೆ.

ಕಳೆದ ತಿಂಗಳು ಕರ್ನಾಟಕವೂ ಸೇರಿದಂತೆ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡಿನಲ್ಲಿ ವಾಯುಭಾರ ಕುಸಿತದಿಂದ ಬೆಳೆದಿದ್ದ ತರಕಾರಿ ನೀರು ಪಾಲಾಗಿತ್ತು. ಆದರೆ ಹೊಸ ಬೆಳೆ ಬರುವವರೆಗೂ ಬೆಲೆ ಇಳಿಕೆ ಸಾಧ್ಯವಿಲ್ಲ ಎಂಬುದು ಮಾರಾಟಗಾರರ ಅಭಿಪ್ರಾಯವಾಗಿತ್ತು.

ಕಳೆದೊಂದು ತಿಂಗಳ ದರಕ್ಕೆ ಹೋಲಿಸಿದರೆ ಶೇ.10ರಷ್ಟು ಇಳಿಕೆಯಾಗಿದೆಯಾದರೂ, ತರಕಾರಿ ಸುಲಭವಾಗಿ ಗ್ರಾಹಕರ ಕೈಗೆಟಕುವಂತಹ ಪರಿಸ್ಥಿತಿ ಇಲ್ಲ. ಈಗಲೂ ಸಹ ನೆರೆಯ ರಾಜ್ಯಗಳಿಗೆ ದಾವಣಗೆರೆಯಿಂದ ಹೆಚ್ಚಿನ ತರಕಾರಿ ರಫ್ತು ಮಾಡಲಾಗುತ್ತಿದೆ. ಪರಿಣಾಮ ಸ್ಥಳೀಯ ಮಾರುಕಟ್ಟೆಯಲ್ಲೂ ತರಕಾರಿ ದರ ಹೆಚ್ಚಾಗಿಯೇ ಇದೆ ಎನ್ನುತ್ತಾರೆ ಹೋಲ್‌ಸೇಲ್ ತರಕಾರಿ ವ್ಯಾಪಾರಿ ಪರಮೇಶ್.

ಮೂಲಂಗಿ ಕೆ.ಜಿ.ಗೆ 40 ರೂ., ಕ್ಯಾರೆಟ್ 100 ರೂ., ಬೀನ್ಸ್ 60 ರೂ., ಸೌತೇಕಾಯಿ 60-70 ರೂ., ನುಗ್ಗೇಕಾಯಿ ಕೆ.ಜಿ.ಗೆ 150-180 ರೂ., ಈರುಳ್ಳಿ 25-30, ಆಲೂಗಡ್ಡೆ 25-30, ಟೊಮ್ಯಾಟೋ 35-40 ರೂ., ಹೂಕೋಸು 50 ರೂ., ಹಸಿ ಮೆಣಸಿನಕಾಯಿ 60-80 ರೂ., ಜವಳಿಕಾಯಿ 80 ರೂ.ಗಳಂತೆ ಮಾರಾಟವಾಗುತ್ತಿದೆ.

ಮಾರುಕಟ್ಟೆಯಲ್ಲಿ ಈಗ ಪ್ರತಿ ಕೆ.ಜಿ.ಗೆ ಹೇಳುತ್ತಿದ್ದ ದರ ಮಾಯವಾಗಿದ್ದು, ಕಾಲು ಕೆ.ಜಿ. ದರ ಮಾತ್ರ ಚಾಲ್ತಿಯಲ್ಲಿದೆ.

ತಿಂಗಳ ಹಿಂದೆ ಇದಕ್ಕಿಂತ ಹೆಚ್ಚಿನ ದರವಿತ್ತು. ವರ್ಷದ ಕೊನೆಯ ತಿಂಗಳು ತರಕಾರಿ ದರದಿಂದ ಕೈ ಸುಟ್ಟುಕೊಂಡ ಜನತೆ ಹೊಸ ವರ್ಷಕ್ಕಾದರೂ ಇಳಿಕೆಯಾಗುತ್ತದೆಯೇ ಎಂದು ಕಾಯುತ್ತಿದ್ದಾರೆ.

# ಅಮರಶಿಲ್ಪಿ ಜಕಣಾಚಾರಿ ಕೊಡುಗೆ ಅನನ್ಯ



ಅಮರಶಿಲ್ಪಿ ಜಕಣಾಚಾರಿ ಅವರ ಭಾವಚಿತ್ರಕ್ಕೆ ಶ್ರೀ ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ ಮತ್ತು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಪುಷ್ಪಾರ್ಚನೆ ಮಾಡುವುದರ ಮೂಲಕ ಜಕಣಾಚಾರಿ ಅವರ ಜಯಂತಿಯನ್ನು ಆಚರಿಸಲಾಯಿತು.

ದಾವಣಗೆರೆ, ಜ.1- ಭಾರತ ದೇಶಕ್ಕೆ ಅಮರಶಿಲ್ಪಿ ಜಕಣಾಚಾರಿ ನೀಡಿದ ಕೊಡುಗೆ ಅಪಾರವಾದುದು. ಜಕಣಾಚಾರಿಯವರ ಶಿಲ್ಪಕಲೆಯಿಂದಲೇ ಕರ್ನಾಟಕ ಜಗತ್ಪ್ರಸಿದ್ಧಿಯಾಗಿದೆ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಜಿಲ್ಲಾ ವಿಶ್ವಕರ್ಮ ಸಮಾಜದ ವತಿಯಿಂದ ನಗರದ ಶ್ರೀ ಕಾಳಿಕಾದೇವಿ ಕಲ್ಯಾಣ ಮಂಟಪದಲ್ಲಿ ಲಿಂ. ಶ್ರೀ ಶಿವಾತ್ಮಾನಂದ ಸರಸ್ವತಿ ಸ್ವಾಮಿಗಳ ಸ್ಮರಣೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಲಿಂ. ಶ್ರೀ ಶಿವಾತ್ಮಾನಂದ ಸರಸ್ವತಿ ಸ್ವಾಮೀಜಿಯವರು ಸಮಾಜಕ್ಕೆ ನೀಡಿದ ಕೊಡುಗೆ ಮಹತ್ತರವಾದುದು. ಅವರ ವಿದ್ವತ್‌ನಿಂದಾಗಿ ರಾಷ್ಟ್ರಸಂತರಾಗಿ ಮೇರು ಶಿಖರವನ್ನೇರಿದವರು. ಸಾಹಿತ್ಯ, ಧರ್ಮಕ್ಕೆ ಹೆಚ್ಚು ಒತ್ತನ್ನು ನೀಡಿದ್ದರು. ಸರಿಯಾದ ಮಾರ್ಗದರ್ಶನ ನೀಡುವ ಮೂಲಕ ಸಮಾಜವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಪ್ರಯತ್ನ ಮಾಡಿದ್ದರು ಎಂದು ಶ್ರೀಗಳ ಸೇವಾ ಕಾರ್ಯವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಶ್ರೀ ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ ಮಾತನಾಡಿ, ಕರ್ನಾಟಕದ ಬೇಲೂರು, ಹಳೇಬೀಡು, ಸೋಮನಾಥಪುರ ಮುಂತಾದ ಐತಿಹಾಸಿಕ ಸ್ಥಳಗಳಲ್ಲಿನ ಶಿಲ್ಪಕಲೆಯ ವೈಭವವನ್ನು ದೇಶದ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ವಿಶ್ವಕರ್ಮ ಸಮಾಜದ ಪಂಚ ಕಸುಬುಗಳು ಜಗತ್ತಿಗೆ ಅತಿ ಅವಶ್ಯಕವಾದವು. ಸಮಾಜದ ಕೊಡುಗೆ ಅಪಾರವಾದುದು ಎಂದು ಹೇಳಿದರು.

> ಇಡೀ ಭಾರತದಲ್ಲಿಯೇ ಶಿಲ್ಪಕಲೆ, ಪರಂಪರೆಯನ್ನು ಎತ್ತಿ ಹಿಡಿದ ಗೌರವ ಅಮರಶಿಲ್ಪಿ ಜಕಣಾಚಾರಿ ಅವರಿಗೆ ಸಲ್ಲುತ್ತದೆ.
>
> - ಶ್ರೀ ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ

ಅಮರಶಿಲ್ಪಿ ಜಕಣಾಚಾರಿ ಅವರ ತತ್ವಾದರ್ಶಗಳನ್ನು ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿ ಸಮಾಜದ ಮೇಲಿದೆ. ವಿಶ್ವಕರ್ಮ ಸಮಾಜ ಇರುವುದರಿಂದಲೇ ದೇವತಾರಾಧನೆ, ಪೂಜೆ, ಪುನಸ್ಕಾರಗಳು ನಡೆಯಲು ಸಾಧ್ಯವಾಗಿದೆ. ಎಲ್ಲ ಸಮುದಾಯಗಳಿಗೂ ವಿಶ್ವಕರ್ಮ ಸಮಾಜದವರ ಅಗತ್ಯತೆ ತುಂಬಾ ಇದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಬಸಾಪುರದ ನಾಗೇಂದ್ರಚಾರ್,

> ವಿಶ್ವಕರ್ಮ ಸಮಾಜ ಪುಟ್ಟ ಸಮಾಜವಾಗಿದ್ದರೂ ಸಹ ನಾಡಿಗೆ, ದೇಶಕ್ಕೆ ನೀಡಿದ ಕೊಡುಗೆ ಅನನ್ಯವಾದುದು. ಸಮುದಾಯದ ಅಧ್ಯಯನ, ಶೋಧನೆ ಮುಖ್ಯವಾಗಿ ಆಗಬೇಕಾಗಿದೆ. ರಾಜಕೀಯವಾಗಿ ಸಮಾಜ ತಾತ್ಸಾರಕ್ಕೆ ಒಳಗಾಗಿದೆ.
>
> - ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಆವರಗೊಳ್ಳ

ಪ್ರಧಾನ ಕಾರ್ಯದರ್ಶಿ ಬಿ.ವಿ. ಶಿವಾನಂದ, ಬೇತೂರು ವಿಜಯಕುಮಾರ್, ಸಿದ್ಧಾಚಾರ್, ಬ್ರಹ್ಮಚಾರ್, ಬಿ.ವಿ. ರಾಜಶೇಖರ್, ವೀರೇಶಾಚಾರ್, ಕೊಟ್ರೇಶಚಾರ್, ಮಂಜುನಾಥಚಾರ್ ಮತ್ತಿತರೆ ಗಣ್ಯರು ಭಾಗವಹಿಸಿದ್ದರು.

## ವೈದ್ಯಕೀಯ ಕಾಲೇಜುಗಳಿಗೆ ಜಮೀನು ಸಮಸ್ಯೆ: ಯೋಜನೆಗೆ ತೊಡಕು

ಔರಂಗಾಬಾದ್, ಜ. 1 – ಕೇಂದ್ರ ಸರ್ಕಾರ ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಮುಂದಾಗಿದೆಯಾದರೂ, ಕೆಲ ರಾಜ್ಯಗಳಲ್ಲಿ ಜಮೀನಿನ ಸಮಸ್ಯೆ ಉಂಟಾಗಿದೆ.

ಕೇಂದ್ರ ಸರ್ಕಾರ 157 ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಿ ಆರೋಗ್ಯ ಮೂಲಭೂತ ಸೌಲಭ್ಯ ಬಲಪಡಿಸಲು ಉದ್ದೇಶಿಸಿದೆ. ಆದರೆ, ಜಮೀನಿನ ಸಮಸ್ಯೆಯಿಂದಾಗಿ ಕಾಲೇಜುಗಳ ಸ್ಥಾಪನೆಗೆ ಹಿನ್ನಡೆಯಾಗಿದೆ ಎಂದು ಕೇಂದ್ರ ಸಚಿವೆ ಭಾರತಿ ಪವಾರ್ ಹೇಳಿದ್ದಾರೆ.

ಕೇಂದ್ರ ಸರ್ಕಾರ ಆರು ಎ.ಐ.ಐ.ಎಂ.ಎಸ್.ಗಳ ಸಂಖ್ಯೆಯನ್ನು 22ಕ್ಕೆ ಹೆಚ್ಚಿಸಲು ಉದ್ದೇಶಿಸಿದೆ. 157 ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಇವು ಕಾಲಮಿತಿಯಲ್ಲಿ ಜಾರಿಗೆ ತರಬೇಕಾದ ಯೋಜನೆಗಳಾಗಿವೆ. ಆದರೆ, ಹಲವಾರು ರಾಜ್ಯಗಳಲ್ಲಿ ಸಮಸ್ಯೆ ಎದುರಾಗಿದೆ. ಜಮೀನು ಲಭ್ಯತೆ ಕೊರತೆಯಿಂದ ಯೋಜನೆಗಳು ಬಾಕಿ ಇವೆ ಎಂದವರು ಹೇಳಿದ್ದಾರೆ.

ಕೊವಿಡ್ ತುರ್ತು ಪರಿಹಾರ ಯೋಜನೆಯ ಅನ್ವಯ ಕೇಂದ್ರ ಸರ್ಕಾರ 23 ಸಾವಿರ ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಇಷ್ಟಾದರೂ ಕೆಲವೆಡೆ ಸಮಸ್ಯೆಗಳು ಮುಂದುವರೆದಿವೆ ಎಂದವರು ಹೇಳಿದ್ದಾರೆ.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿಂದು ಎಳ್ಳು ಅಮವಾಸ್ಯೆ



ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಎಳ್ಳು ಅಮವಾಸ್ಯೆ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.


ಶ್ರೀಮತಿ ಎನ್. ವಿಜಯ ಶ್ಯಾಮಲಾ ಸರಸ್ವತಿ ಮತ್ತು ಎನ್. ವೆಂಕಟಶಿವರಾಮ್, ಶ್ರೀಮತಿ ಶೈಲಜಾ ಮತ್ತು ಎನ್. ವೀರ ವೆಂಕಟ ಸತ್ಯನಾರಾಯಣ ಮತ್ತು ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ.ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ರಾಜ್ಯ ಮಟ್ಟಕ್ಕೆ ಎಸ್.ಬಿ.ಸಿ. ಮಹಿಳಾ ಕಾಲೇಜಿನ ವಿದ್ಯಾರ್ಥಿನಿ ಪ್ರೀತಿ ಆಯ್ಕೆ



ದಾವಣಗೆರೆ, ಜ.1- ಮತದಾರ ಸಾಕ್ಷರತಾ ಸಂಘ ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ನಗರದ ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಬಿ.ಎ. ವಿದ್ಯಾರ್ಥಿನಿ ಕು. ಪ್ರೀತಿ ಕೆ.ಎಸ್. ಅವರು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಪ್ರೀತಿ ಅವರನ್ನು ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಅಧ್ಯಕ್ಷ ಬಿ.ಸಿ. ಉಮಾಪತಿ, ಪ್ರಾಂಶುಪಾಲ ಡಾ. ಕೆ. ಷಣ್ಮುಖ ಮತ್ತು ಇತರರು ಅಭಿನಂದಿಸಿದ್ದಾರೆ.




# ಸೌಗಂಧಿಕ ಪುಷ್ಪ ಮತ್ತು ಪಂಜು ಕವನ ಸಂಕಲನಗಳ ಪುಸ್ತಕ ಲೋಕಾರ್ಪಣೆ



ದಾವಣಗೆರೆ, ಜ.1- ಜಿಲ್ಲೆಯಲ್ಲಿ ಉತ್ತಮ ಯುವ ಬರಹಗಾರರ ದೊಡ್ಡ ಬಳಗವಿದ್ದು, ಅವರಿಗೆ ಪ್ರೋತ್ಸಾಹದ ಅಗತ್ಯವಿದೆ. ಸಾಮಾಜಿಕ ಜಾಲತಾಣಗಳಿಂದ ಸಾಹಿತ್ಯದ ಮಾರ್ಗ ಬದಲಾಗುತ್ತಿದೆ. ಸಂಖ್ಯೆಗಿಂತ ಗುಣಮಟ್ಟ ಮುಖ್ಯವಾಗಬೇಕು ಎಂದು ಅನುವಾದಕರೂ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರೂ ಆದ ಪ್ರೊ. ಎಸ್. ಬಿ. ರಂಗನಾಥ್ ಅಭಿಪ್ರಾಯಪಟ್ಟರು.

ಸ್ಥಳೀಯ ವಿದ್ಯಾನಗರದ ಉದ್ಯಾನವನದಲ್ಲಿ ಪ್ರಗತಿಪರ ಸಾಹಿತ್ಯ ಪರಿಷತ್ ಮತ್ತು ಕಾವ್ಯ ಮಂಡಳದ ಸಹಯೋಗದಲ್ಲಿ ಮೊನ್ನೆ ಹಮ್ಮಿಕೊಂಡಿದ್ದ ಪುಸ್ತಕ ಲೋಕಾರ್ಪಣೆ ಮತ್ತು ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಿರಿಯ ಸಾಹಿತಿ ಡಾ. ಆನಂದ ಋಗ್ವೇದಿ ಅವರ 'ಸೌಗಂಧಿಕ ಪುಷ್ಪ' ಮತ್ತು ಸನಾವುಲ್ಲಾ ನವಿಲೇಹಾಳ್ ಅವರ 'ಪಂಜು' ಕವನ ಸಂಕಲನಗಳನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ಅಧ್ಯಾಪಕ ನಾಗರಾಜ ಸಿರಿಗೆರೆ ಅವರು ಎರಡೂ ಕವನ ಸಂಕಲನಗಳ ಪರಿಚಯ ಮಾಡಿದರು. ಕವಿ ಟಿ. ಎಸ್. ರಾಜೇಂದ್ರ ಪ್ರಸಾದ್ ಅವರು ಋಗ್ವೇದಿ ಅವರ 'ಕರಕೀಯ ಕುಡಿ' ಕಥಾ ಸಂಕಲನ ಕುರಿತು ಮಾತನಾಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಪ್ರಶಸ್ತಿಗೆ ಭಾಜನರಾದ ಬಾಮ ಬಸವರಾಜಯ್ಯ, ಅಮ್ಮ ಪ್ರಶಸ್ತಿ ಪುರಸ್ಕೃತ ಡಾ. ಆನಂದ ಋಗ್ವೇದಿ, ಯುವಕವಿ ಸನಾವುಲ್ಲಾ ನವಿಲೇಹಾಳ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸಲಾಯಿತು.

ಕೊಂಡಜ್ಜಿ ಜಯಪ್ರಕಾಶ್, ಜಿ. ಮುದ್ದು ವೀರಸ್ವಾಮಿ ಹಿರೇಮಳಲಿ, ಡಾ. ಶಿವಕುಮಾರ್ ಕಣಸೋಗಿ, ಮಲ್ಲಿಕಾರ್ಜುನ್ ತೂಲಹಳ್ಳಿ, ಬಸವರಾಜು ಹನುಮಲಿ, ಯು. ಸಿ. ನರೇಶ್, ಉದಯ್ ಇಟ್ಟಗಿ ಮುಂತಾದವರು ಪಾಲ್ಗೊಂಡಿದ್ದರು. ಕವಿ ಕೃಷ್ಣನಾಯ್ಕ್ ಸ್ವಾಗತಿಸಿದರು. ಲೇಖಕ ಬಿ. ಆರ್. ಸುಬ್ರಹ್ಮಣ್ಯ ವಂದಿಸಿದರು. ಶಿಕ್ಷಕ ದಾಗಿನಕಟ್ಟೆ ಪರಮೇಶ್ವರಪ್ಪ ನಿರೂಪಿಸಿದರು.

## ದೇವಸ್ಥಾನಗಳ ಮುಕ್ತತೆ ಸ್ವಾಗತಾರ್ಹ: ಅಣಬೇರು ರಾಜಣ್ಣ



ದಾವಣಗೆರೆ, ಜ.1- ಹಿಂದೂ ದೇವಾಲಯಗಳನ್ನು ಸರ್ಕಾರದ ಹಿಡಿತದಿಂದ ಮುಕ್ತಗೊಳಿಸುವ ಮುಖ್ಯಮಂತ್ರಿಗಳ ನಿರ್ಧಾರವನ್ನು ಚಿಗಟೇರಿಯ ಶ್ರೀ ನಾರದಮುನಿ ಸ್ವಾಮಿ ಟ್ರಸ್ಟ್ ಅಧ್ಯಕ್ಷ ಹಾಗೂ ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಸ್ವಾಗತಿಸಿದ್ದಾರೆ.

ಈ ಐತಿಹಾಸಿಕ ನಿರ್ಧಾರದಿಂದ ದೇವಾಲಯಗಳ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಸ್ವಾಯತ್ತತೆಯಿದ್ದರೆ ಭಕ್ತರಿಗೆ ಹಲವಾರು ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ದೇವಸ್ಥಾನಕ್ಕೆ ಭಕ್ತರಿಂದ ಬರುವ ಕಾಣಿಕೆ ರೂಪದ ಆದಾಯದಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಅವಕಾಶವಿರುತ್ತದೆ. ಸರ್ಕಾರದ ಈ ನಿರ್ಧಾರ ಸ್ವಾಗತಾರ್ಹ ಎಂದು ರಾಜಣ್ಣ ಅಭಿಪ್ರಾಯಪಟ್ಟಿದ್ದಾರೆ.




## ನಗರದಲ್ಲಿಂದು ಜಸ್ಟಿನ್ ಡಿಸೋಜಾ ಅವರಿಗೆ 'ವರ್ಷದ ವ್ಯಕ್ತಿ'ಗೆ ಪ್ರಶಸ್ತಿ



ಜಿಲ್ಲೆ ಸಮಾಚಾರ ಬಳಗದ ಆಶ್ರಯದಲ್ಲಿ 2021 ರ 'ವರ್ಷದ ವ್ಯಕ್ತಿ' ಪ್ರಶಸ್ತಿ ಪ್ರದಾನ ಸಮಾರಂಭ ಇಂದು ಸಂಜೆ 6 ಗಂಟೆಗೆ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ ನಡೆಯಲಿದೆ. ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿಸೌಜಾ ಅವರಿಗೆ ನಾಡೋಜ ಡಾ. ಮಹೇಶ ಜೋಶಿ ಅವರು ಪ್ರಶಸ್ತಿ ಪ್ರದಾನ ಮಾಡುವರು. ಕೈಗಾರಿಕೋದ್ಯಮಿ ಎ.ಎಸ್. ವೀರಣ್ಣ ಅಧ್ಯಕ್ಷತೆ ವಹಿಸುವರು. ಡಾ. ಈಶ್ವರ ಶರ್ಮ, ಶ್ರೀಮತಿ ಸತ್ಯಭಾಮ ಮಂಜುನಾಥ್, ವಿ. ಹನುಮಂತಪ್ಪ ಉಪಸ್ಥಿತರಿರುವರು.

## ಉದ್ಯೋಗ ಆಮಿಷ : ನಕಲಿ ಏಜೆಂಟರುಗಳ ಬಗ್ಗೆ ಎಸ್ಪಿ ಎಚ್ಚರಿಕೆ

ದಾವಣಗೆರೆ, ಜ. 1 - ವಿದೇಶಗಳಲ್ಲಿ ಉದ್ಯೋಗ ಕೊಡಿಸುವ ನೆಪದಲ್ಲಿ ವಂಚಿಸುವ ನಕಲಿ ಏಜೆಂಟರುಗಳ ಬಗ್ಗೆ ಸಾರ್ವಜನಿಕರು ಜಾಗರೂಕರಾಗಿರಬೇಕು. ಆಮಿಷ ಒಡ್ಡುವ ಅನಧಿಕೃತ ಕಂಪನಿ ಅಥವಾ ವ್ಯಕ್ತಿಗಳ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಮನವಿ ಮಾಡಿದ್ದಾರೆ. ವಿದೇಶಾಂಗ ಸಚಿವಾಲಯದ ಬೆಂಗಳೂರಿನ ಆಫೀಸ್ ಆಫ್ ಪ್ರೊಟೆ ಕ್ಟರ್ ಆಫ್ ದಿ ಎಮಿಗ್ರೆಂಟ್ಸ್ ಕಚೇರಿ ವತಿಯಿಂದ ಸಾಗರೋತ್ತರ ನೇಮ ಕಾತಿಗೆ ಸಂಬಂಧಿಸಿದಂತೆ ಅಧಿಕೃತ ನೋಂದಾಯಿತ ಏಜೆಂಟ್ ಕಂಪನಿಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ಈ ವಿವರಗಳನ್ನು www.emigrate.gov.in ವೆಬ್ ತಾಣದಲ್ಲಿ ಪಡೆಯಬಹುದಾಗಿದೆ ಎಂದವರು ತಿಳಿಸಿದ್ದಾರೆ.

## ನಗರಕ್ಕೆ ಇಂದು ಡಾ.ಜೋಶಿ



ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಅಧ್ಯಕ್ಷ ಡಾ.ಮಹೇಶ್ ಜೋಶಿ ಇಂದು ನಗರಕ್ಕಾಗ ಮಿಸಲಿದ್ದು, ಸಂಜೆ 6 ಗಂಟೆಗೆ ಸಿದ್ದಗಂಗಾ ವಿದ್ಯಾಸಂಸ್ಥೆಯ ಆವರಣದಲ್ಲಿ ಜಿಲ್ಲಾ ಸಮಾಚಾರ ಬಳಗದ ವತಿಯಿಂದ ಹಮ್ಮಿಕೊಂಡಿರುವ 2021ರ ವರ್ಷದ ವ್ಯಕ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

## ಸಿರಿಗನ್ನಡ ವೇದಿಕೆಗೆ ಬಸವರಾಜ್ ಅಧ್ಯಕ್ಷ



ದಾವಣಗೆರೆ, ಜ. 1- ನಗರದ ಸಿರಿಗನ್ನಡ ವೇದಿಕೆಯ ದಾವಣಗೆರೆ ಘಟಕದ ಅಧ್ಯಕ್ಷರಾಗಿ ಎಂ. ಬಸವರಾಜ ನೇಮಕೊಂಡಿದ್ದಾರೆ.

ವಿದೇಶ ಪ್ರಯಾಣ-ಶುಭ ಹಾರೈಕೆಗಳು



ದರ್ಶನ್ ಎನ್.ಕೆ.

ಇವರು ಎಂ.ಎಸ್. ಮಾಡಲು ಅಮೇರಿಕಾದ Eastern Michigan University, Ypsilanti, Michigan USAಗೆ ತೆರಳುತ್ತಿದ್ದಾರೆ.
ಅವರ ಪ್ರಯಾಣ ಸುಖಕರವಾಗಿರಲೆಂದು ಹಾರೈಸುವವರು ...

ತಂದೆ : ಕೆ.ವಿ. ನವೀನ್ ಕುಮಾರ್
ತಾಯಿ : ಎಸ್.ಜೆ. ಮಂಗಳ, ಸಾತ್ವಿಕ್ ಎನ್.ಕೆ.
ಅಜ್ಜಿ : ಗಿರಿಜಮ್ಮ ದಿ|| ಎಸ್.ಎಂ. ಜಯದೇವಪ್ಪ
ಅತ್ತೆ : ಅನುಷ ಮುರುಗೇಶ್ ಪಾಟೀಲ್
ಎಸ್.ಟಿ. ಶಿವಕುಮಾರ್ ಪಾಟೀಲ್
ಸವಿತ ಎಸ್.ಜೆ., ಮೋಹನ್ ಕುಮಾರ್ ಪಾಟೀಲ್, ಸ್ಫೂರ್ತಿ
ದೀಪಕ್ ಎಸ್. ಪಾಟೀಲ್, ಯುಕ್ತ ಎಂ. ಪಾಟೀಲ್
ನಿಹಾರಿಕ ಎಂ. ಪಾಟೀಲ್ ಹಾಗೂ ಬಂಧು-ಮಿತ್ರರು

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte